# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ರಾಷ್ಟ್ರೀಯ ಸ್ವಯಂಸೇವಕ ಸಂಘದ ತೃತೀಯ ವರ್ಷದ ಸಂಘ ಶಿಕ್ಷಾ ವರ್ಗ 2022 ನಾಗಪುರದಲ್ಲಿ ನಡೆದಿದ್ದು ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು, ಕಾಶಿ ಮಹಾಪೀಠ ಅವರು ಭಾಗವಹಿಸಿದ್ದರು ಹಾಗೂ ಸರಸಂಘಚಾಲಕರಾದ ಡಾ. ಮೋಹನ್ ಭಾಗವತ್ ಅವರು ಮುಖ್ಯ ಭಾಷಣ ಮಾಡಿದರು.


ಸಂಪುಟ : 44 | ಸಂಚಿಕೆ : 18 | ಪುಷ್ಯ-ಮಾಘ | ಕಲಿಯುಗಾಬ್ದ 5124 | 01-01-2023 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


## ಆಡಳಿತದಲ್ಲಿ ತಂತ್ರಜ್ಞಾನ – ಸುಶಾಸನದೆಡೆಗೆ ಮಹತ್ವದ ಹೆಜ್ಜೆ

ಸುಶಾಸನ ದಿನ (ಗುಡ್ ಗೌವರ್ನೆನ್ಸ್ ಡೇ) ಪ್ರಜಾಪ್ರಭುತ್ವದಲ್ಲಿ ಸರಕಾರದ ಮುಖ್ಯ ಕಾರ್ಯ ದೇಶದ ಆಡಳಿತ. ಸ್ವಾತಂತ್ರ್ಯ ನಂತರದಲ್ಲಿ ಆಡಳಿತದ ವೈಖರಿಯಲ್ಲಿ ಅನೇಕ ಬದಲಾವಣೆಗಳಾಗಿವೆ. ಅದರಲ್ಲೂ 2000ದ ಇಸವಿಯ ನಂತರದಲ್ಲಿ ಭಾರತದಲ್ಲಿ ನಡೆದ ತಂತ್ರಜ್ಞಾನದ ಕ್ರಾಂತಿಯ ದೆಸೆಯಿಂದ ಆಡಳಿತವು ಹೊಸ ದೆಸೆಯೆಡೆಗೆ ತಿರುಗಿದೆ. ಇತ್ತೀಚೆಗಂತೂ ಆಡಳಿತದಲ್ಲಿ ತಂತ್ರಜ್ಞಾನದ ಪಾತ್ರ ಬಹಳ ಮಹತ್ವದ್ದಾಗಿದೆ. ಕಾಲಕ್ಕೆ ತಕ್ಕಂತೆ ಸರಕಾರವೂ ಈ ನಿಟ್ಟಿನಲ್ಲಿ ಹೆಜ್ಜೆ ಹಾಕುತ್ತಾ ಇ-ಗೌವರ್ನೆನ್ಸ್ ಕಡೆಗೆ ನಡೆಯುತ್ತಿದೆ. ಜನರನ್ನು ಮುಟ್ಟುವ ಅವರ ಆಶೋತ್ತರಗಳನ್ನು ಆಲಿಸುವ, ಪ್ರತಿ ಪ್ರಜೆಯ ಅಭಿಮತಕ್ಕೂ ಮಾನ್ಯತೆ ದೊರೆಯುವ ಪ್ರಜಾಪ್ರಭುತ್ವದ ಮೂಲಭೂತ ಅಂಶವನ್ನು ಇಂದು ಇ-ಗೌವರ್ನೆನ್ಸ್ ಸಾಕಾರಗೊಳಿಸುತ್ತಿದೆ.

ಅನೇಕ ಬಾರಿ ಅದು ಜನಕೇಂದ್ರಿತವಾಗಿಯೂ, ಆಧುನಿಕ ತಂತ್ರಜ್ಞಾನವನ್ನು ಒಳಗೊಂಡಂತಿದ್ದಾಗ ಸರಕಾರದ ಆಡಳಿತದಲ್ಲಿ ಪಾರದರ್ಶಕತೆ ತನ್ನಿಂತಾನೆ ರೂಪುಗೊಳ್ಳುತ್ತದೆ. ಈ ಹಿಂದೆ ರಾಜೀವಗಾಂಧಿಯವರು ಪ್ರಧಾನಮಂತ್ರಿಯಾಗಿದ್ದಾಗ 1985ರಲ್ಲಿ ಒಡಿಶಾದ ಬರಪೀಡಿತ ಪ್ರದೇಶ ಕಾಲಹಂಡಿಗೆ ಭೇಟಿ ನೀಡಿದಾಗ 'ಕೇಂದ್ರದಿಂದ ಒಂದು ರೂಪಾಯಿ ಕಳಿಸಿದರೆ ಅದು ಜನರಿಗೆ ತಲುಪುವಾಗ ಬರೀ 15 ಪೈಸೆಯಾಗಿರುತ್ತದೆ' ಎಂದು ಹೇಳಿಕೆ ನೀಡಿದ್ದರು. ಆದರೆ ಇಂದು ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯ ಕಾರಣದಿಂದ ರೈತರ ಖಾತೆಗೆ ನೇರವಾಗಿ ಹಣ ಜಮೆಯಾಗುತ್ತದೆ. ಕೇಂದ್ರ ಸರಕಾರದಿಂದ 6,000 ಸಾವಿರ ರೂಪಾಯಿ ಬಿಡುಗಡೆಯಾದರೆ ರಾಜ್ಯ ಸರಕಾರವು ಇನ್ನೂ 4,000 ಸಾವಿರ ರೂಪಾಯಿಗಳನ್ನು ನೀಡುತ್ತಿದ್ದು, ಒಟ್ಟು 10,000 ರೂಪಾಯಿಗಳು ನೇರವಾಗಿ ಯಾವುದೇ ಮಧ್ಯವರ್ತಿಗಳ, ದಲ್ಲಾಳಿಗಳ ಸಹಾಯವಿಲ್ಲದೆ, ನೂರಾರು ಬಾರಿ ಬ್ಯಾಂಕಿಗೆ, ಸರಕಾರೀ ಕಚೇರಿಗಳಿಗೆ ಎಡತಾಕದೆ ರೈತರು ನೇರವಾಗಿ ತಮ್ಮ ಖಾತೆಯಲ್ಲಿರುವ ಹಣವನ್ನು ಕೃಷಿ ಚಟುವಟಿಕೆಗೆ ಬಳಸಿಕೊಳ್ಳಬಹುದಾಗಿದೆ. ಈ ರೀತಿಯಾಗಿ ಸರಕಾರದ ಬಳಿ 72 ಲಕ್ಷ ರೈತರ ದತ್ತಾಂಶವಿದೆ.

ಕೋವಿಡ್ ಸಂದರ್ಭದಲ್ಲಿ ಹೂವು ಮಾರಾಟಗಾರರಿಗೆ ಅತ್ಯಂತ ಅನಾನುಕೂಲವಾಗಿತ್ತು. ಆಗಿನ ಮುಖ್ಯಮಂತ್ರಿಗಳಾಗಿದ್ದ ಬಿ.ಎಸ್ ಯಡಿಯೂರಪ್ಪನವರು 25,000 ರೂಪಾಯಿಗಳನ್ನು ತಲಾ ಒಬ್ಬೊಬ್ಬ ಹೂವಿನ ಬೆಳೆಗಾರರಿಗೆ ವಿತರಣೆ ಮಾಡಲಾಗುತ್ತದೆ ಎಂದು ಘೋಷಿಸಿದರು. ಹೀಗೆ ರಿಯಲ್ ಟೈಮ್‌ನಲ್ಲಿ ಹೂವಿನ ಬೆಳೆಗಾರರಿಗೆ ಪರಿಹಾರ ಧನವನ್ನು ವಿತರಿಸಲು ಸಾಧ್ಯವಾಯಿತು. ಇನ್ನು ಆ ರೀತಿಯಲ್ಲಿ ಸರಕಾರದ ಬಳಿ ಫಲಾನುಭವಿಗಳ ದತ್ತಾಂಶವನ್ನು ಆಗಾಗ ಸುಧಾರಿಸುವ ಅವಕಾಶವೂ ಉಂಟು. ಇನ್ನು ಈ ಮೂಲಕ ಬೆಳೆ ಸಮೀಕ್ಷೆ ನಡೆಸುವುದು, ಪರಿಹಾರದ ವಿತರಣೆ, ರೈತರಿಗೆ ಸಹಾಯಧನ, ಬರಪರಿಹಾರ ನೆರೆ ಪರಿಹಾರ ಮುಂತಾದ ಅನೇಕ ಸವಲತ್ತುಗಳನ್ನು ನೇರವಾಗಿ ಈಗಾಗಲೇ ತಲುಪಿಸಲಾಗುತ್ತಿದೆ. ಇದು ಸಂಪೂರ್ಣವಾಗಿದೆಯೆಂದು ಹೇಳಲಾಗದಿದ್ದರೂ ಈ ನಿಟ್ಟಿನಲ್ಲಿ ಅತ್ಯಂತ ಹೆಚ್ಚಿನ ಪ್ರಯತ್ನ ಈಗಾಗಲೇ ಜಾರಿಯಲ್ಲಿದೆ. ಈ ರೀತಿಯಲ್ಲಿ ಆಡಳಿತದ ಮಾದರಿಯಲ್ಲಿ ಸುಧಾರಣೆಯಾಗುವುದಲ್ಲದೆ ದೇಶದಲ್ಲಿರುವ ಭ್ರಷ್ಟಾಚಾರ, ಅನೀತಿಗಳಿಗೂ ತಕ್ಕ ಮಟ್ಟಿಗಿನ ಪರಿಹಾರ ಇ-ಆಡಳಿತದಿಂದ ದೊರೆಯುತ್ತಿದೆ.

ಇನ್ನು ಇತ್ತೀಚೆಗೆ ಸರಕಾರದ ಕಡೆಯಿಂದ ನಡೆಸಲಾಗುತ್ತಿರುವ ಸೇವಾಸಿಂಧು ವೆಬ್ ಪೋರ್ಟಲ್ ಸರಕಾರದ ಸರ್ವೀಸ್‌ಗಳನ್ನು ಆನ್‌ಲೈನ್ ಮೂಲಕ ಪಡೆಯಲು ಅತ್ಯಂತ ಸಹಾಯಕವಾಗಿದೆ. ಈ ವೆಬ್ ಪೋರ್ಟಲ್ ಕೇವಲ ಅಷ್ಟಕ್ಕೇ ನಿಲ್ಲದೆ ಯಾರೂ ಅಂತರ್ಜಾಲದ ಸೇವೆ ಪಡೆದುಕೊಳ್ಳಲು ಸಾಧ್ಯವಿಲ್ಲವೋ ಅಂಥವರಿಗೆ ಸ್ವಿಗ್ಗಿ ಝೋಮ್ಯಾಟೋ ಹೇಗೆ ಮನೆ ಬಾಗಿಲಿಗೆ ತಂದು ತಲುಪಿಸುವ ಸೇವೆ ನೀಡುತ್ತದೆಯೋ ಅದೇ ರೀತಿಯಲ್ಲಿ ಸರಕಾರದ ಸೇವೆಗಳನ್ನು 'ಜನ ಸೇವಕ' ಯೋಜನೆಯ ಮೂಲಕ ಪಡೆದುಕೊಳ್ಳಬಹುದಾದಗಿದೆ. ಸೂಕ್ತ ದಾಖಲೆಗಳು, ಅಗತ್ಯ ವಿವರಗಳನ್ನು ನೀಡಿದರೆ ಕೆಲಸ ಆದಷ್ಟು ತ್ವರಿತವಾಗಿ ಮುಗಿದುಹೋಗುತ್ತದೆ. ಪಿಪಿಪಿ ಮಾಡೆಲ್ ಅಂದರೆ ಪಬ್ಲಿಕ್ ಪ್ರೈವೇಟ್ ಪಾರ್ಟ್ನರ್‌ಶಿಪ್ ಯೋಜನೆಗಳ ಮೂಲಕ ಇಂದು ಜನಕೇಂದ್ರಿತವಾದ, ಸುಲಭ ಮತ್ತು ಸರಳ ಆಡಳಿತವನ್ನು ನೀಡುವ ಅನೇಕ ಯೋಜನೆಗಳೂ ಸಹ ಅದರಲ್ಲಿ ಒಳಗೊಂಡಿದೆ.

ಇನ್ನು ಪ್ರತಿಬಿಂಬ ಎನ್ನುವ ವೆಬ್‌ಸೈಟಿನಲ್ಲಿ ಒಟ್ಟು ಸರಕಾರದ ಯೋಜನೆಗಳ ಫಲಾನುಭವಿಗಳ ಡಾಟಾ ದೊರೆಯುತ್ತದೆ. ಯಾವ ಯೋಜನೆಯಿಂದ ಯಾವ ಭಾಗದ ಜನರಿಗೆ ಅನುಕೂಲವಾಗಿದೆ ಎನ್ನುವುದರಿಂದ ಹಿಡಿದು ತಾಲೂಕಿನ ಮಟ್ಟದವರೆಗೂ ಫಲಾನುಭವಿಗಳ ವಿವರಗಳು ದೊರೆಯುತ್ತದೆ. ಹೀಗಾದಾಗ ಸರಕಾರವು ತನ್ನ ಆರ್ಥಿಕ ಮತ್ತು ಆಡಳಿತಾತ್ಮಕ ಸಂಪನ್ಮೂಲವನ್ನು ಅತ್ಯಂತ




ಸಮರ್ಪಕವಾಗಿ ಬಳಸಿಕೊಳ್ಳಲು ಸಹಾಯವಾಗುತ್ತದೆ. ಅಲ್ಲದೆ ಯಾವುದೇ ರೀತಿಯ ಗೋಜಲುಗಳಿಲ್ಲದ ಪಾರದರ್ಶಕ ವ್ಯವಸ್ಥೆಗೆ ಅನುವು ಮಾಡಿಕೊಡುತ್ತದೆ. ಅಷ್ಟು ಮಾತ್ರವೇ ಅಲ್ಲದೆ ಯೋಜನೆಗಳ ಕುರಿತಾಗಿ ಮಾಹಿತಿಯ ಜೊತೆಗೆ ಅದರ ಮೇಲ್ವಿಚಾರಣೆ, ಕೊನೆಯ ಹಂತದವರೆಗೂ ಮಾಹಿತಿ ದೊರೆಯುವುದರಿಂದ ಮೈಕ್ರೋ ಮ್ಯಾನೇಜ್ ಮಾಡಲೂ ಸಹಾಯ ಮಾಡುತ್ತದೆ. ಹಾಗೂ ಅನೇಕ ಬಾರಿ ದೂರಗಾಮಿಯಾದ ಶಾಶ್ವತ ಪರಿಹಾರದ ಯೋಜನೆಯನ್ನು ಮಾಡುವ ದೃಷ್ಟಿಯಿಂದಲೂ ಇದು ಅಗತ್ಯವಾದ ನೆರವು ನೀಡುತ್ತದೆ. ಆಡಳಿತದಲ್ಲಿ ಜನರಿಗೆ ಅನುಕೂಲತೆ, ಪಾರದರ್ಶಕತೆಯ ಜೊತೆಜೊತೆಗೆ ವಿಕಾಸದ ದೃಷ್ಟಿಯಿಂದಲೂ ಈ ದತ್ತಾಂಶಗಳ ಸಂಗ್ರಹ ಅನುಕೂಲಕರವಾಗಿರುತ್ತದೆ. ಇನ್ನು ಸರಕಾರದ 'ಮಾಹಿತಿ ಕಣಜ' ಜಾಲತಾಣವೂ ಸಹ ಆಯಾ ಕ್ಷೇತ್ರವಾರು ಅಂದರೆ ಶಿಕ್ಷಣ, ಆರೋಗ್ಯ, ಕೃಷಿ ಹೀಗೆ ಮಾಹಿತಿಗಳ ಆಗರವನ್ನೇ ಜನರ ಮುಂದಿಡುತ್ತದೆ.

ಇನ್ನು ಜನಸ್ನೇಹಿ ಆಡಳಿತ ವ್ಯವಸ್ಥೆಯನ್ನು ರೂಪಿಸುವುದರ ಜೊತೆಗೆ ಸರಕಾರದ ಸಂಪನ್ಮೂಲಗಳ ಸೋರಿಕೆಯನ್ನು ತಡೆಗಟ್ಟುವಿಕೆ ಹಾಗೂ ಮಾಫಿಯಾಗಳ ಮೇಲೆ ನಿಯಂತ್ರಣ ಸಾಧಿಸಿ ಆರೋಗ್ಯಕರ ಸಮಾಜದ ನಿರ್ಮಾಣವೂ ಕೂಡ ಸುಶಾಸನದ ಭಾಗವೇ ಸರಿ. ಈ ನಿಟ್ಟಿನಲ್ಲಿ ನಡೆದ ಪ್ರಯೋಗ ಕಾವೇರಿ 2.0 ವೆಬ್ ಪೋರ್ಟಲ್. ನೋಂದಣಿ ಹಾಗೂ ಸ್ಟ್ಯಾಂಪಿಂಗ್‌ಗೆ ಸಂಬಂಧಿಸಿದಂತೆ ಯಾವುದೇ ಅವ್ಯವಹಾರ ನಡೆಯದ ಹಾಗೆ ಸಂಪೂರ್ಣ ಬ್ಲಾಕ್ ಚೈನ್ ತಂತ್ರಜ್ಞಾನವನ್ನು ಆಧರಿಸಿದ ವ್ಯವಸ್ಥೆಯನ್ನು ರೂಪಿಸಿದ್ದು ಯಾರೂ ಸಹ ಅದನ್ನು ಹ್ಯಾಕ್ ಅಥವಾ ಟ್ಯಾಂಪರಿಂಗ್ ಮಾಡಲಾಗದ ರೀತಿಯಲ್ಲಿ ರೂಪಿಸಲಾಗಿದೆ. ತಿಂಗಳುಗಳ ಕಾಲ ಮಧ್ಯವರ್ತಿಗಳ ಹಾವಳಿಯಲ್ಲಿ ಹೆಚ್ಚು ಕಮಿಶನ್ ಪಾವತಿ ಮಾಡುವ ಮೂಲಕ ನಡೆಯುತ್ತಿದ್ದ ಖಾತೆ ಬದಲಾವಣೆ ಮತ್ತು ನೋಂದಣಿಗಳು ಈಗ ಸುಲಭ. ಅಗತ್ಯ ದಾಖಲೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಿ, ಅರ್ಜಿ ಹಾಕಿದರೆ ಕೇವಲ ವಾರ-ಹತ್ತು ದಿನದೊಳಗೆ ಈ ಪ್ರಕ್ರಿಯೆಗಳು ಮುಗಿಯುತ್ತದೆ, ಇದು ಇ-ಆಡಳಿತದ ಮಾದರಿ.

ಇನ್ನು ಇದೇ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಡೈರೆಕ್ಟ್ ಬೆನಿಫಿಟ್ ಟ್ರಾನ್ಸ್‌ಫರ್ ಮೂಲಕ ವಿತರಣೆ ಮಾಡಲಾಗುತ್ತಿದೆ. ಆರೋಗ್ಯ ವಿಮೆ, ಕೃಷಿ, ರೈಲ್ವೇ ಮುಂತಾದ ಅನೇಕ ಕ್ಷೇತ್ರಗಳಲ್ಲಿ ತಂತ್ರಜ್ಞಾನದ ಮೂಲಕ ಆಡಳಿತದಲ್ಲಿ ಸುಧಾರಣೆ ನಡೆಯುತ್ತಿದೆ. ಅದರಲ್ಲೂ ಕರ್ನಾಟಕ, ಹರಿಯಾಣ ಮತ್ತು ರಾಜಸ್ಥಾನಗಳಲ್ಲಿ ರಾಜ್ಯ ಸರಕಾರಗಳು ಇ-ಆಡಳಿತದಲ್ಲಿ ಅತ್ಯಂತ ಮಹತ್ವದ ಹೆಜ್ಜೆಗಳನ್ನು ಇರಿಸಿದೆ. ತಂತ್ರಜ್ಞಾನಕ್ಕೆ ಹೆಸರಾದ ಕರ್ನಾಟಕದಲ್ಲಂತೂ ಇ-ಆಡಳಿತದಲ್ಲಿ ಗುರುತರವಾದ ಕೆಲಸಗಳಾಗಿದ್ದು ಇತರ ರಾಜ್ಯಗಳಿಗೆ ಮಾದರಿಯಾಗಿದೆ. ಎಲ್ಲಾ ಸರಕಾರದ ವೆಬ್‌ಸೈಟುಗಳಲ್ಲೂ ಜನರ ಕಷ್ಟಗಳನ್ನು ಸೂಕ್ತವಾಗಿ ಪರಿಹಾರ ನೀಡುವ ದೃಷ್ಟಿಯಿಂದ 'ಪಬ್ಲಿಕ್ ಗ್ರೀವೆನ್ಸ್ ರಿಡ್ರೆಸಲ್ ಸಿಸ್ಟಮ್' ಒಂದನ್ನು ವ್ಯವಸ್ಥೆ ಮಾಡಲಾಗಿದ್ದು ಪಾಪ್ ಅಪ್ ನೋಟಿಫಿಕೇಶನ್ ಲಭ್ಯವಿದೆ. ಈಗಾಗಲೇ ಸರಕಾರದ 300 ವೆಬ್ ಸೈಟ್‌ಗಳನ್ನು ಕೇಂದ್ರೀಕೃತವಾದ ವ್ಯವಸ್ಥೆಯೊಳಗೆ ಇದನ್ನು ಅಳವಡಿಸಿದ್ದು ಇನ್ನೂ 800 ವೆಬ್‌ಸೈಟುಗಳನ್ನು ಈ ವ್ಯವಸ್ಥೆಯೊಳಗೆ ತರುವ ಪ್ರಯತ್ನ ಆರಂಭವಾಗಿದೆ.

ಇನ್ನು ಹೊಸ ಮಾದರಿಯ ಪ್ರಯೋಗಗಳೂ ಕರ್ನಾಟಕದಲ್ಲಿ ನಡೆಯುತ್ತಿದೆ. 'ಕುಟುಂಬ್' ಎನ್ನುವ ತಂತ್ರಾಂಶ ತಯಾರಾಗಿದ್ದು ಅದರಲ್ಲಿ ಒಂದು ಕುಟುಂಬವು ಯಾವೆಲ್ಲಾ ಸರಕಾರದ ಯೋಜನೆಗಳನ್ನು ಪಡೆಯುತ್ತಿದೆ, ಯಾವೆಲ್ಲ ಸವಲತ್ತುಗಳ ಫಲಾನುಭವಿಯಾಗಿದೆ, ಅದರ ಗಾತ್ರವೆಷ್ಟು, ಅದರ ಆದಾಯದ ಮೂಲವೇನು, ಹೀಗೆ ಅನೇಕ ಅಂಶಗಳನ್ನು ಟ್ರಾಕ್ ಮಾಡಲು ಅನುಕೂಲವಾಗಿದೆ. ಇದರಿಂದ ಇಡಿಯ ಕಟುಂಬಕ್ಕೆ ಅಗತ್ಯವಾದ ಅನೇಕ ಕೆಲಸಗಳು ಸುಲಭವಾಗಲಿದೆ. ಉದಾಹರಣೆಗೆ ಆ ಕುಟುಂಬದಲ್ಲಿ ಯಾರಾದರೂ ಒಬ್ಬ ವ್ಯಕ್ತಿಯು 60 ವರ್ಷಕ್ಕೆ ತಲುಪಿದರೆ ತಂತ್ರಾಂಶದ ಮೂಲಕ ಸೀನಿಯರ್ ಸಿಟಿಜನ್ ಕಾರ್ಡು, ಪಿಂಚಣಿಗೆ ಅರ್ಹರಾಗಿದ್ದರೆ ಪಿಂಚಣಿ ಪಡೆಯಲು ಅನುಕೂಲವಾಗುವಂತೆ ತಂತ್ರಾಂಶವನ್ನು ರೂಪಿಸಲಾಗಿದೆ. ಅಲ್ಲದೆ ಇದರೊಂದಿಗೆ ಸರಕಾರದ ಸಂಪನ್ಮೂಲಗಳ ಸೋರಿಕೆಯೂ ತಡೆಗಟ್ಟಬಹುದಾಗಿದೆ. ಉದಾಹರಣೆಗೆ ಗ್ಯಾಸ್ ಸಬ್ಸಿಡಿಯ ವಿಚಾರದಲ್ಲಿ, ಪಡಿತರ ವಿತರಣೆಯ ವ್ಯವಸ್ಥೆಯಲ್ಲಿ ಹಾಗೂ ಏಕೀಕೃತ ವ್ಯವಸ್ಥೆಯಿಂದ ವಿನಾಕಾರಣ ಸರಕಾರಿ ಕಛೇರಿಗಳಿಗೆ ಅಲೆದಾಟವೂ ತಪ್ಪುತ್ತದೆ. ಇದು ಪೈಲೆಟ್ ಹಂತದಲ್ಲಿದ್ದು ಬಿಪಿಎಲ್ ಕಾರ್ಡು ಹೊಂದಿರುವವರಿಗೆ ಅನುಕೂಲವಾಗುವಂತೆ ಅದನ್ನು ರೂಪಿಸಲಾಗಿದ್ದು. ಎಪಿಎಲ್ ಕಾರ್ಡುದಾರರ ಡಿಜಿಟಲ್ ಸರ್ಟಿಫಿಕೇಶನ್ನಿನ ಪ್ರಮಾಣ ಕಡಿಮೆಯಿರುವುದರಿಂದ ಆ ಬಗೆಗೆ ಮುಂದಿನ ಹಂತದಲ್ಲಿ ಯೋಜನೆ ರೂಪಿಸಲಾಗುತ್ತದೆ ಎನ್ನುತ್ತಾರೆ ಸರಕಾರದ ಇ-ಆಡಳಿತ ಸಲಹೆಗಾರರಾದ ಶ್ರೀ ಬೇಳೂರು ಸುದರ್ಶನ.

ಇನ್ನು ಆಪ್‌ಗಳ ದೃಷ್ಟಿಯಿಂದ ಸರಕಾರದ ಎಲ್ಲಾ ಅಧಿಕೃತ ಆಪ್‌ಗಳನ್ನು ಒಂದೇ ವೆಬ್‌ಸೈಟಿನ ಅಡಿಯಲ್ಲಿ apps.kar.co.inನಲ್ಲಿ ನೀಡಲಾಗಿದ್ದು ಅನೇಕ ಜನರು ಖಾಸಗಿ, ದಲ್ಲಾಳಿ, ಮಧ್ಯವರ್ತಿ ಆಪ್‌ಗಳನ್ನು ದೂರವಿಡಬಹುದಾಗಿದೆ.

ಒಟ್ಟಾರೆಯಾಗಿ ಇ-ಆಡಳಿತವು ಬೆಳೆಯುತ್ತಿರುವ ಈ ತಂತ್ರಜ್ಞಾನದ ಯುಗದಲ್ಲಿ ಅನಿವಾರ್ಯವೂ ಹೌದು, ಅಗತ್ಯವೂ ಹೌದು. ಮಾಜಿ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿಯವರ ಜನ್ಮದಿನವಾದ ಡಿಸೆಂಬರ್ 25ರಂದು ಸುಶಾಸನ ದಿನ ಎಂದು ಆಚರಿಸಲಾಗುತ್ತದೆ. ಇಂದಿನ ದಿನಮಾನದಲ್ಲಿ ಸುಶಾಸನ ಎನ್ನುವುದನ್ನು ಇ-ಗೌವರ್ನೆನ್ಸ್ ಪರ್ಯಾಯ ಪದವೆಂಬಂತೆ ಬಳಕೆ ಮಾಡುವಷ್ಟು ಸುಧಾರಣೆಗಳು ನಡೆಯುತ್ತಿದೆ. ಒಟ್ಟಾರೆ ತಂತ್ರಜ್ಞಾನವು ಆಡಳಿತದ ವೈಖರಿಯನ್ನೇ ಸಂಪೂರ್ಣವಾಗಿ ಬದಲು ಮಾಡುವ ನಿಟ್ಟಿನಲ್ಲಿ ದಾಪುಗಾಲಿಡುತ್ತಿದೆ ಎಂದರೆ ತಪ್ಪಾಗಲಾರದು. ■

## ಸಂಸ್ಮರಣೆ

# ಭಾರತರತ್ನ ಎಂ.ಎಸ್. ಸುಬ್ಬುಲಕ್ಷ್ಮಿ (ಸೆಪ್ಟೆಂಬರ್ 16, 1916 – ಡಿಸೆಂಬರ್ 11, 2004)



1916ರಲ್ಲಿ ದೇವಾಲಯಗಳ ನಗರ ಮಧುರೈಯಲ್ಲಿ ವೀಣಾವಾದಕಿ ಷಣ್ಮುಖ ವಡಿವು ಅವರ ಹಿರಿಯ ಮಗಳಾಗಿ ಸುಬ್ಬುಲಕ್ಷ್ಮಿ ಜನಿಸಿದರು. ವೀಣಾವಾದಕಿಯಾದ ವಡಿವಾಂಬಾಳ್ ಅವರ ತಂಗಿಯಾದರೆ ಮೃದಂಗವಾದಕನಾದ ಶಕ್ತಿವೇಲು ಸಹೋದರ.

ಹತ್ತು ವರ್ಷವಿದ್ದಾಗ ಸಂಗೀತ ಜಗತ್ತಿಗೆ ಸುಬ್ಬುಲಕ್ಷ್ಮಿ ಪರಿಚಯವಾಯಿತು. ಎಚ್.ಎಂ.ವಿ. ಅವರ ಒಂದು ತಟ್ಟೆಗೆ ಜಂಜೂಟಿ ರಾಗದ ಒಂದು ತಮಿಳು ಹಾಡನ್ನು ಆಕೆ ಹಾಡಿದರು. ತಾಯಿಯೇ ಮೊದಲ ಗುರು. ವೇದಿಕೆಯಲ್ಲಿ ತಾಯಿಯ ವೀಣಾವಾದನದ ಜೊತೆ ಈಕೆ ಹಾಡುವುದಿತ್ತು. ತಟ್ಟೆಯ ಆ ಹಾಡಿನಲ್ಲೇ ಸೌಂದರ್ಯಾತ್ಮಕ ಸೂಚನೆಗಳಿದ್ದವು. ಹರಿತವಾದ ಮತ್ತು ಧೈರ್ಯದ ಸಂಗೀತಾಭಿವ್ಯಕ್ತಿ ಇತ್ತು. ಹಾಡಿಕೆಯಲ್ಲಿ ವೇಗವಿದ್ದು ವೇಗದ ಸಂಗತಿಗಳನ್ನು ಸಲೀಸಾಗಿ ಹಾಡಿದ್ದಾರೆ. ಸಂಗೀತ ಸ್ವರಭಾರ ಮುಕ್ತ ಮತ್ತು ಸಹಜವಾಗಿದ್ದು, ರಚನೆಯ ಬಾಗು-ಬಳುಕುಗಳಲ್ಲಿ ಸಾಗುವಾಗ ಲೋಪಗಳಾಗಿಲ್ಲ. ಆಗಲೇ ಆಕೆಯಲ್ಲಿ ದೊಡ್ಡ ಕಲಾವಿದರ ಪಕ್ವತೆಯಿತ್ತು.

ಸಂಗೀತಕ್ಕೆ ಆಧ್ಯಾತ್ಮಿಕದ ಸ್ಪರ್ಶನೀಡುವ ಒಂದು ಘಟನೆ ಎಂ.ಎಸ್. ಅವರ ಬಾಲ್ಯಜೀವನದಲ್ಲಿ ನಡೆದಿತ್ತು. ಪುಟ್ಟ ಬಾಲಕಿಯಾದ ಆಕೆ ಮನೆಬಾಗಿಲಲ್ಲಿ ನಿಂತು ಬೀದಿಯಲ್ಲಿ ಹೋಗಿಬರುವವರನ್ನು ನೋಡುತ್ತಿದ್ದಾಗ, ಕಾವಿ ಪಂಚೆ, ಹಣೆ-ಕೈಗಳಲ್ಲಿ ವಿಭೂತಿ, ಕುತ್ತಿಗೆಯಲ್ಲಿ ರುದ್ರಾಕ್ಷಿಮಾಲೆ, ಕೈಯಲ್ಲಿ ತಾಮ್ರದ ತಂಬಿಗೆ ಮತ್ತು ಕಮಂಡಲು ಹಿಡಿದ ಓರ್ವ ವೃದ್ಧರು ಸಾಗಿಹೋಗುತ್ತಿದ್ದರು. ಒಂದು ದಿನ ಆತ, 'ಮಗು, ನಿನಗೊಂದು ಹಾಡು ಹೇಳಿಕೊಡಬೇಕೆನಿಸಿದೆ; ಕಲಿಯುತ್ತೀಯಾ?' ಎಂದು ಕೇಳಿದರು. ಈಕೆ ಒಪ್ಪಿದಾಗ 'ಘೃತಗುಡ ಪಾಯಸರ' ಎಂಬ ಶ್ಲೋಕದಿಂದ ಪಾಠವನ್ನು ಆರಂಭಿಸಿದರು. ಅದು ಗ್ರಂಥ ಎಂಬ ಭಾಷೆಯ ರಚನೆ; ಈಗ ಆ ಭಾಷೆ ಕಾಣಿಸುವುದಿಲ್ಲ. ಆತ ತೀರ್ಥಯಾತ್ರೆಗೆಂದು ಕಾಶಿಗೆ ಹೋಗುವ ತನಕ ಪಾಠ ನಡೆಯಿತು ಎಂದು ಸುಬ್ಬುಲಕ್ಷ್ಮಿಯವರೇ ತಮ್ಮ ಬಾಲ್ಯದ ನೆನಪುಗಳಲ್ಲಿ ಹೇಳಿದ್ದರು.

ಶಾಲೆಯಲ್ಲಿ ಎಂ.ಎಸ್. ಐದನೇ ತರಗತಿವರೆಗೆ ಕಲಿತರು. ಒಬ್ಬ ಶಿಕ್ಷಕ ವಿನಾಕಾರಣ ತುಂಬ ಹೊಡೆದರಂತೆ. ಅದರಿಂದ ಹೆದರಿ ಶಾಲೆಯನ್ನೇ ಬಿಟ್ಟರು; ಮತ್ತೆ ಅಮ್ಮನೇ ಗುರು. ಹಾಗೆ ಕುಳಿತು ಅವಳು ನನಗೆ ಎಂದೂ ಪಾಠ ಹೇಳಿಕೊಡದಿದ್ದರೂ ನಿಜವಾಗಿ ಅವಳೇ ನನ್ನ ಮೊದಲ ಗುರು. ಅವಳು ತನ್ನ ಶಿಷ್ಯರಿಗೆ ಹೇಳಿಕೊಡುವಾಗ ನಾನು ಕೇಳಿ ಕಲಿತದ್ದೇ ಹೆಚ್ಚು. ಹಾಗೆಯೇ ಅವಳು ವೀಣೆ ನುಡಿಸುವಾಗ ಜೊತೆಗೆ ಹಾಡುತ್ತಲೂ ಕಲಿಯುತ್ತಿದ್ದೆ; ಮತ್ತು ನನಗೆ ಸಂಗೀತಪಾಠಕ್ಕೆಂದು ಶ್ರೀನಿವಾಸ ಅಯ್ಯಂಗಾರ್ ಎಂಬ ಗುರುಗಳನ್ನು ಅಮ್ಮ ಗೊತ್ತುಮಾಡಿದ್ದಳು. ಅವರಿಂದ ಚೆನ್ನಾಗಿಯೇ ಕಲಿಯುತ್ತಿದ್ದೆ. ಆದರೆ ಪಾಠ ಹೆಚ್ಚು ಮುಂದುವರಿಯಲಿಲ್ಲ. ಯಾವುದೋ ಕೆಲಸದ ನಿಮಿತ್ತ ಬೇರೆ ಊರಿಗೆ ಹೋದ ಅವರು ಮರಳಲಿಲ್ಲ. ಅಲ್ಲೇ ಕಾಲವಾದರು. ದೊಡ್ಡ ಸಂಗೀತಗಾರರ ಸಂಗೀತವನ್ನು ಕೇಳಿ ಕಲಿಯುತ್ತಿದ್ದೆ. ರೇಡಿಯೋದಲ್ಲಿ ಪ್ರಸಾರವಾಗುವ ಸಂಗೀತವನ್ನು ತುಂಬ ಕೇಳುತ್ತಿದ್ದೆ. ನಮ್ಮ ಮನೆಯಲ್ಲಿ ರೇಡಿಯೋ ಇರಲಿಲ್ಲ. ಆದರೆ ನಮ್ಮ ಮನೆ ಮಹಡಿಯ ಮೆಟ್ಟಿಲಿನ ಮೇಲೆ ಹತ್ತಿ ಕುಳಿತರೆ ಪಕ್ಕದ ಮನೆಯ ರೇಡಿಯೋ ಸ್ಪಷ್ಟವಾಗಿ ಕೇಳುತ್ತಿತ್ತು ಎಂದೂ ಹೇಳಿಕೊಂಡಿದ್ದರು.

1940ರ ದಶಕದ ಮಧ್ಯದ ಹೊತ್ತಿಗೆ ಎಂ.ಎಸ್. ಪ್ರಸಿದ್ಧ ಗಾಯಕಿಯಾಗಿ, ಚಿತ್ರನಟಿಯಾಗಿ ಎರಡೂ ಪರಸ್ಪರ ಪೂರಕವಾಗಿ ಬೆಳೆದರು. 1940ರ ಜುಲೈನಲ್ಲಿ ಸದಾಶಿವಂ ಜೊತೆ ವಿವಾಹ ಆಗುವುದರೊಂದಿಗೆ ಅವರ ಸಂಗೀತಜೀವನದಲ್ಲೂ ಬದಲಾವಣೆಗಳು ಕಂಡುಬಂದವು. ಅದನ್ನು ಪರಿವರ್ತನೆ ಅಥವಾ ಮಾನಸಿಕ ಪುನರ್ವ್ಯವಸ್ಥೆ ಎನ್ನಬಹುದು. ಓರ್ವ ಆದರ್ಶ ಬ್ರಾಹ್ಮಣ ಗೃಹಿಣಿಯಾದ ಆಕೆ ಮೇಲ್ವರ್ಗದವರ ದೃಷ್ಟಿಯಲ್ಲೂ ಪರಿಶುದ್ಧತೆ ಮತ್ತು ಭಕ್ತಿಯ ಸಾಕಾರರೂಪವಾಗಿ ಬೆಳೆದರು; ಸಾಮಾಜಿಕ ಗೌರವ ಬೆಳೆಯಿತು. ವೃತ್ತಿಪರವಾಗಿ ಏನು ಮಾಡಬೇಕೆಂಬುದು ಸದಾಶಿವಂ ಅವರಿಗೆ ಗೊತ್ತೆಂದು ಆಕೆ ನಂಬಿದರು. ವ್ಯವಹಾರಕ್ಕೆ ಸಂಬಂಧಿಸಿದ ವಿಷಯಗಳನ್ನು ಅವರಿಗೆ ಒಪ್ಪಿಸಿ ತಮ್ಮ ಮನಸ್ಸನ್ನು ಸಂಗೀತದಲ್ಲಿ ಕೇಂದ್ರೀಕರಿಸಿದರು. ಕರ್ನಾಟಕ ಸಂಗೀತದಲ್ಲಿ ಸಾಹಿತ್ಯಕ್ಕೆ ಪ್ರಾಧಾನ್ಯ; ಈ ಸಾಹಿತ್ಯ ಮುಖ್ಯವಾಗಿ ಭಕ್ತಿಪರವಾದದ್ದು. ಸಾಹಿತ್ಯಕ್ಕೆ ಒತ್ತುಕೊಟ್ಟು ತನ್ಮಯತೆಯಿಂದ ಹಾಡಿದ ಎಂ.ಎಸ್., ಶ್ರೋತೃಗಳ ದೊಡ್ಡಭಾಗದ ಕಣ್ಣಿನಲ್ಲಿ ಕ್ರಮೇಣ ಭಕ್ತಿ – ಆಧ್ಯಾತ್ಮಿಕತೆಗಳ ಪ್ರತಿರೂಪವಾಗಿ ಬೆಳೆದರು; ಅವರ ಸ್ವರ ಎಲ್ಲರಿಗೂ ಶಾಂತಿ-ಸಮಾಧಾನಗಳನ್ನು ನೀಡಿತು.

1947ರಲ್ಲಿ ತಮಿಳು ಸಿನೆಮಾ 'ಮೀರಾ' ಹಿಂದೀ ಭಾಷೆಯಲ್ಲಿ ಬಿಡುಗಡೆಯಾದಾಗ ಎಂ.ಎಸ್. ದೇಶದಾದ್ಯಂತ ಒಮ್ಮೆಲೇ ಪ್ರಸಿದ್ಧಿಗೆ ಬಂದರು. 1938-47ರ ನಡುವೆ ಸುಬ್ಬುಲಕ್ಷ್ಮಿ ಐದು ಸಿನೆಮಾಗಳಲ್ಲಿ ನಟಿಸಿದರು. ಪಾತ್ರಗಳು ಸಂಗೀತಪ್ರಧಾನವಾಗಿದ್ದುದೇ ಅದಕ್ಕೆ ಮುಖ್ಯ ಕಾರಣ. ಸದಾಶಿವಂ ಅವರ 'ಕಲ್ಕಿ' ಪತ್ರಿಕೆಯ ಸ್ಥಾಪನೆಗೆ ಹಣ ಸಂಗ್ರಹಿಸಲು ಅವರು 'ಸಾವಿತ್ರಿ' ಚಿತ್ರದಲ್ಲಿ ನಾರದನ ಪಾತ್ರ ಮಾಡಿ ಸಂಗೀತದ ಸುಧೆಯನ್ನು ಹರಿಸಿದರು. ಮುಂದಿನ ಮೀರಾ ಪಾತ್ರ ಅವರ ಮೇಲೆ ವೈಯಕ್ತಿಕವಾಗಿಯೂ ವೃತ್ತಿಪರವಾಗಿಯೂ ಪ್ರಭಾವ ಬೀರಿತು. ಆಕೆ ತನ್ನನ್ನು ದಾಸಿ ಮೀರಾ ಎಂದುಕೊಂಡರು. 'ಮೀರಾ' ಚಿತ್ರ ಹಿಂದಿಯಲ್ಲಿ ಯಶಸ್ವಿಯಾಗಿ ಉತ್ತರ ಭಾರತದಲ್ಲಿ ಅವರಿಗೆ ಅಧಿಕೃತ ಮನ್ನಣೆ ಸಿಗತೊಡಗಿತು. ಗಾಂಧಿ, ನೆಹರು ಅವರೆಲ್ಲ ಎಂ.ಎಸ್. ಅಭಿಮಾನಿಗಳಾದರು. ಉತ್ತರದಲ್ಲಿ ಅವರ ಸಂಗೀತ ಕಚೇರಿಗಳಿಗೆ ಬೇಡಿಕೆ ಹೆಚ್ಚಿತು.

ಉತ್ತರ ಭಾರತದ ಶ್ರೀಮಂತ ಉದ್ಯಮಪತಿಗಳಿಗೆ ತಮ್ಮ ಮನೆಯ ಮದುವೆಗಳಲ್ಲಿ ಎಂ.ಎಸ್. ಸಂಗೀತ ಏರ್ಪಡಿಸುವ ಹುಚ್ಚು. ಮುಂಬಯಿಯಲ್ಲೇ ಬೇಕಾದ ಭಜನ್ ಗಾಯಕರಿರುವಾಗ ಎಂ.ಎಸ್. ಅವರೇ ಏಕೆ ಎಂದು ಕೇಳಿದಾಗ ಓರ್ವ ಉದ್ಯಮಪತಿ ಹೇಳಿದ್ದು ಮಾರ್ಮಿಕವಾಗಿತ್ತು, 'ಒಳ್ಳೆಯ ಸಂಗೀತ ಎಷ್ಟೋ ಜನರಿಂದ ಕೇಳಬಹುದು. ಆದರೆ ಒಳ್ಳೆಯದರ ಜೊತೆಗೆ ನಮ್ಮಲ್ಲೊಂದು ದೈವಿಕ, ಸ್ವರ್ಗಸುಖದ ನೆಮ್ಮದಿಯನ್ನು ಸೃಷ್ಟಿಸುವ ಸಂಗೀತವನ್ನು ಇವರಿಂದ ಮಾತ್ರ ಕೇಳಬಹುದು. ಇವರು ಮದುವೆಯಲ್ಲಿ ಹಾಡಿದರೆ ವಧೂವರರಿಗೆ ಉತ್ತಮ ಆಶೀರ್ವಾದ ಸಿಕ್ಕಿದಂತೆ!' ಅವರ ಕಚೇರಿಗಳು ಮೀರಾಭಜನ್ ಇಲ್ಲದೆ ಪೂರ್ಣವಾಗುತ್ತಿರಲಿಲ್ಲ. 1950ರ ದಶಕದ ಕೊನೆ ಹಾಗೂ 1960ರ ದಶಕದ ಆರಂಭದ ಹೊತ್ತಿಗೆ ಸುಬ್ಬುಲಕ್ಷ್ಮಿ ಕಚೇರಿಗಳಿಗಾಗಿ ಇಡೀ ದೇಶದಲ್ಲಿ ಪ್ರವಾಸ ಮಾಡುತ್ತಿದ್ದರು.

ಮೀರಾಭಜನ್‌ಗಳಿಂದ ಮುಂದುವರಿದು ಆಕೆ ಕಚೇರಿಯ ಸ್ಥಳ-ಸನ್ನಿವೇಶಗಳ ಸಂದರ್ಭವನ್ನು ಗಮನಿಸಿಕೊಂಡು ತುಲಸೀದಾಸ್, ಕಬೀರ್, ನಾನಕ್, ಸೂರದಾಸ್, ತುಕಾರಾಮ್ ಮುಂತಾಗಿ ಧಾರ್ಮಿಕ ಸಂಗೀತದ ಭಾರೀ ಸಂಗ್ರಹವನ್ನೇ ಮಾಡಿಕೊಂಡರು. ರಬೀಂದ್ರಸಂಗೀತವನ್ನು ಕೂಡ ಕಲಿತರು. ಆ ಮೂಲಕ ಕಲೆಯ ಕಲಾತ್ಮಕತೆಗೆ ಪುನರ್ವ್ಯವಸ್ಥೆಯನ್ನು ಕಲ್ಪಿಸಿದರು. ಇದಕ್ಕೆಲ್ಲ ಪತಿಯ ಪ್ರೋತ್ಸಾಹವಿತ್ತು. 1963ರಲ್ಲಿ ಸುಬ್ಬುಲಕ್ಷ್ಮಿ ಅವರ 'ವೆಂಕಟೇಶ ಸುಪ್ರಭಾತ' ಬಂತು. ಜನಪ್ರಿಯತೆಯಲ್ಲಿ ಅದೊಂದು ಕ್ರಾಂತಿಯನ್ನೇ ಮಾಡಿತು. ವಿಷ್ಣುಸಹಸ್ರನಾಮ, ಭಜಗೋವಿಂದಂ ಮುಂತಾಗಿ ಆಕೆ ಧಾರ್ಮಿಕ ಮತ್ತು ಭಕ್ತಿಪರ ಧ್ವನಿಮುದ್ರಿಕೆಗಳನ್ನು ಮಾಡುತ್ತಾ ಹೋದರು.

ಎಂ.ಎಸ್. ಅವರ ಕಚೇರಿಗಳಿಗೆ ಮೂರು ದಶಕಕ್ಕೂ ಮಿಕ್ಕಿ ಮೃದಂಗ ನುಡಿಸಿದ ಟಿ.ಕೆ. ಮೂರ್ತಿ ಅವರು ನೀಡುವ ಒಂದು ವಿವರ ಇಲ್ಲಿ ಉಲ್ಲೇಖಾರ್ಹ. 'ಎಂ.ಎಸ್. ಒಂದೇ ಒಂದು ದಿನ ದೊಡ್ಡಸ್ತಿಕೆ ತೋರಿದವರಲ್ಲ. ಕಚೇರಿ ಇದ್ದಾಗ ಮಾತ್ರ ಅವರು ವಜ್ರದ ಒಡವೆಗಳನ್ನು ಧರಿಸುತ್ತಿದ್ದರು. ಇಲ್ಲದಿದ್ದಾಗ ಎಲ್ಲವನ್ನೂ ಕಳಚಿಟ್ಟು ಗಾಜಿನ ಬಳೆ ಮಾತ್ರ ಧರಿಸುತ್ತಿದ್ದರು. ಕಿವಿಯಲ್ಲಿ ಸಾಧಾರಣವಾದ ಒಂದು ಬಂಗಾರದ ಓಲೆ ಮಾತ್ರ ಇರುತ್ತಿತ್ತು. ಮನೆಯಲ್ಲಿ ಕೇವಲ ನೂಲಿನ ಸೀರೆ ಉಡುತ್ತಿದ್ದರು. ಒಬ್ಬ ಸಾಧಾರಣ ಹುಡುಗಿ ಹಾಡುತ್ತಿದ್ದರೂ ಅವರು ಕುಳಿತು ಕೇಳುತ್ತಿದ್ದರು. ಅವರಿಗೆ ಕೋಪವೇ ಇರಲಿಲ್ಲ. ಮನನೊಂದಾಗ ಅತ್ತುಬಿಡುತ್ತಿದ್ದರು. ಪುರಂದರದಾಸರ ಕೃತಿಗಳ ಅರ್ಥ ತಿಳಿದಾಗ ಅವರ ಕಣ್ಣುಗಳಲ್ಲಿ ನೀರು ಹರಿಯುತ್ತಿತ್ತು. ಅವರು ಬಹುದೊಡ್ಡ ದಾನಿ. ಮದ್ರಾಸ್ ಮ್ಯೂಸಿಕ್ ಅಕಾಡೆಮಿ ಕಟ್ಟಡಕ್ಕೆ ಹಣ ನೀಡಿದವರು ಅವರೇ' ಎಂದು ಕೂಡ ಮೂರ್ತಿ ಹೇಳಿದ್ದಾರೆ.

ಎಂ.ಎಸ್. ಅವರ ಗುರುಗಳೂ ಆದ ಹಿರಿಯ ಗಾಯಕ, ಸಂಗೀತ ವಿದ್ವಾಂಸ ಶೆಮ್ಮಂಗುಡಿಯವರು ಎಂ.ಎಸ್. ಅವರಲ್ಲಿ ಮೂರು ತಾಂತ್ರಿಕ ಪರಿಣತಿಗಳನ್ನು ಗುರುತಿಸಿದ್ದರು. ಅವರ ತಾನದ ಪ್ರಸ್ತುತಿ, ಮಂದ್ರಸ್ಥಾಯಿಯಲ್ಲಿ ಸುಲಲಿತವಾಗಿ ಸುಮಧುರವಾಗಿ ಸಂಚರಿಸುವ ಅವರ ಕಂಠ, ಶ್ರುತಿಶುದ್ಧಿ. ಅವರ ಶಾರೀರಕ್ಕೆ ಸ್ಪಷ್ಟತೆ, ಮೊನಚು ಮತ್ತು ಶ್ರುತಿಶುದ್ಧತೆಗಳಿವೆ. ಅದು ಸಮೀಪದಿಂದ ಹಾಗೂ ದೂರದಿಂದ ಗಟ್ಟಿಯಾಗಿ ಸ್ಪಷ್ಟವಾಗಿ ಕೇಳಿಸುವ ಅಪರೂಪದ ಕಂಠ. ತಾನ ಹಾಡುವುದರಲ್ಲಿ ತಮ್ಮ ಕಾಲದ ಗಾಯಕಿಯರಲ್ಲಿ ಎಂ.ಎಸ್. ಅತ್ಯುತ್ತಮ. ಏಕೆಂದರೆ ಎಷ್ಟಾದರೂ ಅವರು ವೀಣಾವಾದಕಿ ಅಲ್ಲವೆ? ಎಂದು ಶೆಮ್ಮಂಗುಡಿ ಹೇಳಿದ್ದಾರೆ. ■

### ಎಲ್ಲೋ ಕೇಳಿದ ಕಥೆ

ಭಗವಾನ್ ರಮಣ ಮಹರ್ಷಿಯ ಬಳಿ ಕಣ್ಣಿಲ್ಲದ ಒಬ್ಬ ಕಡುಬಡವಿ ವೃದ್ಧೆ ಅಂಧ ಭಕ್ತೆ ಪ್ರತಿನಿತ್ಯವೂ ಬರುತ್ತಿದ್ದಳು. ಶ್ರೀ ರಮಣ ಮಹರ್ಷಿಯವರು ಗಿರಿ ಪ್ರದಕ್ಷಿಣೆ ಮಾಡಿ ಬರುವವರೆಗೂ ಅಲ್ಲಿಯೇ ನಿರೀಕ್ಷಿಸುತ್ತಾ ಕುಳಿತಿರುತ್ತಿದ್ದಳು.

ಒಂದು ಬಾರಿ ಭಗವಾನರು ತಮಾಷೆಯಿಂದ! ಆ ವೃದ್ಧೆಯ ಹತ್ತಿರ "ಅಜ್ಜಿ! ನೀನು ನನ್ನನ್ನು ನೋಡಲಾರೆ ಅಲ್ಲವೇ! ಆದರೂ, ಹೀಗೆ ಬೆಳಗ್ಗೆಯೇ ಕಷ್ಟ ಪಟ್ಟು ಬಂದು ನನ್ನ ಎದುರುಗಡೆ ಏಕೆ ಕುಳಿತುಕೊಳ್ಳುತ್ತೀಯಾ?" ಎಂದು ಪ್ರಶ್ನಿಸಿದರು.

ಆಗ, ಆ ವೃದ್ಧೆ, ಅಮಿತವಾದ ಆರ್ದ್ರತೆಯಿಂದ "ಭಗವಾನ್! ನಾನು ನಿನ್ನನ್ನು ನೋಡಲು ಆಗದೆ ಇದ್ದರೂ, ನೀನು ನನ್ನನ್ನು ನೋಡುತ್ತೀಯಾ ಅಲ್ಲವೇ! ಅಷ್ಟು ಸಾಕು" ಎಂದಳು. ಆ ಮಾತುಗಳನ್ನು ಕೇಳಿದ ಕೂಡಲೇ ಮಹರ್ಷಿ ಕಣ್ಣು ತುಂಬಿ ಕೊಂಡವು. ನಾವು ಭಗವಂತನನ್ನು ನೋಡಲು ಆಗದೆ ಇದ್ದರು, ಭಗವಂತನು ನಮ್ಮನ್ನು ನೋಡುತ್ತಾನೆ ಅಲ್ಲವೇ.

ನಮ್ಮ ಆಲೋಚನೆಗಳೇ ನಮ್ಮನ್ನು ರೂಪಿಸುತ್ತವೆ. ಆದ್ದರಿಂದ ಏನನ್ನು ಯೋಚಿಸುತ್ತೀರೋ ಅದರ ಬಗ್ಗೆ ಎಚ್ಚರದಿಂದಿರಿ.
– ಸ್ವಾಮಿ ವಿವೇಕಾನಂದ

**ಸಂಪಾದಕೀಯ ಸಹಕಾರ:** ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್, ಸುನಿಲ್ ಕುಲಕರ್ಣಿ

# ಆಸ್ಪತ್ರೆ, ಚಿಕಿತ್ಸೆ ಪಡೆಯುವಂತ ಸಮಾಜ ನಿರ್ಮಾಣವಾಗದೆ, ಸ್ವಾಸ್ಥ್ಯದ ಜನಜೀವನ ರೂಪಿಸುವಲ್ಲಿ ಬದುಕಿನ ತಪ್ಪು ದಾರಿಗಳಿಂದ ದೂರವಿರೋಣ, ಅದೇ ಲಕ್ಷ್ಯವಾಗಿರಲಿ – ದತ್ತಾತ್ರೇಯ ಹೊಸಬಾಳೆ ಅಭಿಮತ

**ಬೆಂಗಳೂರು:** ಬೆಂಗಳೂರಿನ ರಾಷ್ಟ್ರೋತ್ಥಾನ ಪರಿಷತ್ತು ರಾಜರಾಜೇಶ್ವರಿ ನಗರದಲ್ಲಿ ನೂತನವಾಗಿ ನಿರ್ಮಿಸಿರುವ 'ಜಯದೇವ ಸ್ಮಾರಕ ರಾಷ್ಟ್ರೋತ್ಥಾನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ'ವನ್ನು ಸೋಮವಾರ ಸಂಜೆ ಜ್ಯೋತಿ ಉದ್ದೀಪನಗೊಳಿಸಿ ಉದ್ಘಾಟಿಸಲಾಯಿತು.

ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹರಾದ ಶ್ರೀ ದತ್ತಾತ್ರೇಯ ಹೊಸಬಾಳೆ ಮಾತನಾಡಿ, ಸಮಾಜದ ಆರೋಗ್ಯ ಸಂರಕ್ಷಣೆಯಲ್ಲಿ ರಾಷ್ಟ್ರೋತ್ಥಾನ ನಿರ್ವಹಿಸುತ್ತಿರುವ ಅಮೂಲ್ಯ ಕೊಡುಗೆಗೆ ಜನರ ಸ್ವಾಸ್ಥ್ಯ ನಿರ್ವಹಣೆಯ ನಿಟ್ಟಿನಲ್ಲೂ ತೊಡಗಿಕೊಂಡಿರುವುದು ಈ ಮೂಲಕ ಸಾಕಾರಗೊಂಡಿದೆ. ಸೇವೆ, ಶಿಕ್ಷಣ, ಜಾಗೃತಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೋತ್ಥಾನ ಪರಿಷತ್ತು, ಅದರ ಚೇತನರಾಗಿದ್ದ ಮೈ.ಚ. ಜಯದೇವರ ಸ್ಮರಣಾರ್ಥ ಆರಂಭಿಸಲಾದ ಈ ಆಸ್ಪತ್ರೆ ವ್ಯಾಪಕ ಕ್ರಾಂತಿ ಸೃಷ್ಟಿಸಲಿದೆ ಎಂದರು. ವಿವಿಧ ಸಂಸ್ಥೆಗಳ ಧ್ಯೇಯದ ಸಾಕಾರಕ್ಕೆ, ಸಮಾಜದ ಏಳ್ಗೆಗಾಗಿ ನಿರ್ದೇಶಿಸಿ, ಶಿಸ್ತು, ಚೌಕಟ್ಟು ರೂಪಿಸಿದ ವ್ಯಕ್ತಿ ಮಾತ್ರವಲ್ಲ ಶಕ್ತಿಯಾಗಿದ್ದವರು ಜಯದೇವರು ಎಂದು ನೆನಪಿಸಿದರು. ಸಂಘದ ಇತಿಹಾಸದಲ್ಲಿ ವ್ಯಕ್ತಿಯನ್ನು ಸ್ಮಾರಕವಾಗಿಸುವ ಕ್ರಮವಿಲ್ಲ. ಆದರೆ ಅದಕ್ಕೆ ಅಪವಾದವೆಂಬಂತೆ ಮನನೀಯ ಮೈ.ಚ. ಜಯದೇವರ ಹೆಸರಿಗೆ ಅಂತಹದೊಂದು ಅವಕಾಶ ಮೂಡಿಬಂದಿರುವುದು ಆ ವ್ಯಕ್ತಿತ್ವ, ಸಮಾಜಕ್ಕೆ ನೀಡಿದ ಯೋಗದಾನದ ಪ್ರತೀಕ ಎಂದು ವಿಶ್ಲೇಷಿಸಿದರು. ತನ್ನನ್ನು ತಾನೇ ರೂಪಿಸಿ, ನೂರಾರು ಇತರ ವ್ಯಕ್ತಿತ್ವಗಳನ್ನು ಸಾಮಾಜಿಕ ಪ್ರತಿಬದ್ಧತೆಯೊಂದಿಗೆ ರೂಪಿಸಿದ ಜಯದೇವರ ಸ್ಮರಣಾರ್ಥ ಆರಂಭಿಸಲಾದ ಈ ವಿಶೇಷ ಪರಿಕಲ್ಪನೆಯ ಆಸ್ಪತ್ರೆ, ಆರೋಗ್ಯ ಪೂರ್ಣ ವ್ಯವಸ್ಥೆ ನಿರ್ಮಾಣದ ಹೊಸ ದಿಶೆಯೊಂದು ಈ ಮೂಲಕ ಸಾಕಾರಗೊಳ್ಳುತ್ತಿದೆ ಎಂದರು. ಆಸ್ಪತ್ರೆ, ಚಿಕಿತ್ಸೆ ಪಡೆಯುವಂತ ಸಮಾಜ ನಿರ್ಮಾಣವಾಗದೆ, ಸ್ವಾಸ್ಥ್ಯದ ಜನಜೀವನ ರೂಪಿಸುವಲ್ಲಿ ಬದುಕಿನ ತಪ್ಪು ದಾರಿಗಳಿಂದ ದೂರವಿರೋಣ. ಅದೇ ಲಕ್ಷ್ಯವಾಗಿರಲಿ ಎಂದರು.

ರಾಷ್ಟ್ರೀಯ ಸ್ವಯಂಸೇವಕ ಸಂಘ ಹಾಗೂ ರಾಷ್ಟ್ರೋತ್ಥಾನ ಪರಿಷತ್ತು ಸಾಮಾಜಿಕ ಪರಿಕಲ್ಪನೆಯಲ್ಲಿ ಸಮಾಜಕ್ಕೆ ನೀಡುತ್ತಿರುವ ಬಹು ಆಯಾಮಗಳ ಕೊಡುಗೆಗಳು ಎಂದಿಗೂ ಸ್ತುತ್ಯರ್ಹವಾದುದು. ಈ ಮೂಲಕ ರೂಪುಗೊಂಡ ಹಲವಾರು ಮಹತ್ತರ ರಾಷ್ಟ್ರಾರಾಧಕರ ಪೈಕಿ ಮೈ.ಚ. ಜಯದೇವ ಅವರು ಪೂರ್ಣ ಬದುಕನ್ನು ರಾಷ್ಟ್ರ ಸೇವೆಗೆ ಮುಡಿಪಾಗಿಟ್ಟವರು. ಸರಳ ಬದುಕು, ವ್ಯಕ್ತಿತ್ವದ ಮೂಲಕ ಮಾದರಿಯಾಗಿದ್ದವರು. ಯುವ ಸಮಾಜದಲ್ಲಿ ರಾಷ್ಟ್ರಪ್ರೇಮ ಉದ್ದೀಪನಗೊಳಿಸುವಲ್ಲಿ ಅವರ ಸೇವೆ ಮಹತ್ತರ. ಅವರ ಸ್ಮರಣಾರ್ಥ ಈ ಆಸ್ಪತ್ರೆ ರೂಪುಗೊಂಡಿರುವುದು ಸ್ತುತ್ಯರ್ಹ ಎಂದವರು ಈ ಸಂದರ್ಭ ತಿಳಿಸಿದರು. ಈ ಸಂದರ್ಭ ಆಯುಷ್ಮಾನ್ ಭಾರತ ಯೋಜನೆಯ ಮೂಲಕ ರೋಗಿಗಳ ಆಯ್ಕೆಯ ಆಸ್ಪತ್ರೆಯ ಸೌಲಭ್ಯ ಪಡೆಯುವ ಕಾನೂನಿಗೆ ಬದಲಾಗುವ ಮೂಲಕ ಜನಸಾಮಾನ್ಯರಿಗೂ ಸುಲಲಿತ ಚಿಕಿತ್ಸೆ ಲಭಿಸುವಂತಾಗಬೇಕು ಎಂದು ಶ್ರೀಗಳು ಕರೆನೀಡಿದರು.

ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ಇನ್ಫೋಸಿಸ್ ಫೌಂಡೇಶನ್‌ನ ಸಂಸ್ಥಾಪಕಿ, ಮೂರ್ತಿ ಫೌಂಡೇಶನ್ ಅಧ್ಯಕ್ಷೆ, ಶ್ರೀಮತಿ ಸುಧಾಮೂರ್ತಿ ಮಾತನಾಡಿ, ರಾಷ್ಟ್ರೋತ್ಥಾನದ ಹತ್ತು ಹಲವು ಯೋಜನೆಗಳು ಸ್ತುತ್ಯರ್ಹವಾದುದು. ಕಳೆದ 35 ವರ್ಷಗಳಿಗಿಂತಲೂ ಹೆಚ್ಚು ವರ್ಷಗಳಿಂದ ರಾಷ್ಟ್ರೋತ್ಥಾನದೊಂದಿಗಿನ ಸಂಬಂಧ ಗಮನಾರ್ಹ. ಮೈ. ಚ. ಜಯದೇವರ ಆತ್ಮ ತೃಪ್ತಿಹೊಂದುತ್ತದೆ. ಆರೋಗ್ಯ ಕ್ಷೇತ್ರದಲ್ಲಿ ಅದರಲ್ಲೂ ಮಹಿಳೆಯರ ಆರೋಗ್ಯ ಸಂರಕ್ಷಣೆಗೆ ನೆರವಾಗುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಗಳಿಕೆಯ ಒಂದಂಶವನ್ನು ದಾನ ಮಾಡುವ ಮನೋಭಾವ ಬೆಳೆಸಬೇಕು ಎಂದು ತಿಳಿಸಿದರು.

ಇನ್ನೋರ್ವ ಮುಖ್ಯ ಅತಿಥಿಗಳಾಗಿದ್ದ ಬೆಂಗಳೂರು ನಾರಾಯಣ ಹೆಲ್ತ್‌ನ ಸ್ಥಾಪಕ ಡಾ. ದೇವಿಪ್ರಸಾದ್ ಶೆಟ್ಟಿ ಮಾತನಾಡಿ, ಆಸ್ಪತ್ರೆ ನಿರ್ಮಾಣ, ಆರೋಗ್ಯ ಕ್ಷೇತ್ರದ ನಿರ್ವಹಣೆ ಜಗತ್ತಿನ ಅತೀ ಸವಾಲಿನ ಮತ್ತು ಮಹತ್ತರ ವಿಭಾಗವಾಗಿ ಬೆಳೆದಿದೆ. ಮುಂದಿನ ಐದರಿಂದ ಏಳು ವರ್ಷಗಳಲ್ಲಿ ಭಾರತ ಜಗತ್ತಿನ ಅತ್ಯುತ್ತಮ ಸ್ವಾವಲಂಬಿ ಚಿಕಿತ್ಸಾ ಸೌಲಭ್ಯಗಳ ರಾಷ್ಟ್ರವಾಗಿ ಮೂಡಿಬರಲಿದೆ. ಜಗತ್ತಿನಾದ್ಯಂತ ಭಾರತೀಯ ಮೂಲದ ನಿಪುಣ ವೈದ್ಯರು ಅದ್ವಿತೀಯ ಸೇವೆ ನೀಡುತ್ತಿರುವುದು ಭಾರತೀಯ ಜ್ಞಾನಪರಂಪರೆ, ಸಂಶೋಧನೆ, ಸಂವೇದನೆಯ ಸಂಕೇತ. ಆರೋಗ್ಯ ಕ್ಷೇತ್ರದ ದಾದಿಯರ ಸೇವಾ ನಿರತರೆಲ್ಲ ಬಹುಪಾಲು ಭಾರತೀಯರೆಂಬುದು ಹೆಮ್ಮೆ ತಂದಿದೆ. ಆಯುಷ್ಮಾನ್ ಭಾರತ ಯೋಜನೆಯ ಮೂಲಕ ಸಾಮಾನ್ಯ ರೋಗಿಗಳಿಗೂ ಅತ್ಯುತ್ತಮ ಚಿಕಿತ್ಸೆ ಸೌಲಭ್ಯಗಳು ಲಭಿಸುತ್ತಿದೆ ಎಂದು ಅವರು ತಿಳಿಸಿದರು.




ರಾಷ್ಟ್ರೋತ್ಥಾನ ಪರಿಷತ್ತಿನ ಅಧ್ಯಕ್ಷ ಶ್ರೀ ಎಂ.ಪಿ ಕುಮಾರ್, ಆಡಳಿತ ಸಮಿತಿಯ ಪದಾಧಿಕಾರಿಗಳಾದ ಶ್ರೀ ಸುಧೀರ್ ಪೈ, ಡಾ. ಸಂಧ್ಯಾ ರವಿ, ಡಾ. ಕಿಶೋರ್, ಎಸ್. ವಿ.ಎಸ್ ಸುಬ್ರಹ್ಮಣ್ಯ ಗುಪ್ತ, ಡಾ. ಶ್ರೀನಾಥ್, ಸಲಹಾ ಮಂಡಳಿ ಸದಸ್ಯ, ಡಾ. ಎಚ್.ಆರ್. ನಾಗೇಂದ್ರ, ಡಾ. ಬಿ.ಎನ್. ಗಂಗಾಧರ್, ಡಾ. ನರೇಶ್ ಭಟ್, ಡಾ. ಸರಳರೇಖ, ಡಾ. ಆರ್. ನಾಗರತ್ನ, ಡಾ. ಸಂಧ್ಯಾ ನಂಜುಡಯ್ಯ, ಡಾ. ಲತಾ ವೆಂಕಟರಾಮನ್, ಡಾ. ತಿಮ್ಮಪ್ಪ ಹೆಗಡೆ, ಡಾ. ರವೀಶ್, ಡಾ. ಟಿ.ಎನ್. ಶ್ರೀಧರ್, ಡಾ. ಕೆ.ಎಸ್. ಸತೀಶ್, ಡಾ. ಶೇಖರ ಪಾಟೀಲ್, ಡಾ. ವತ್ಸಲ, ಡಾ. ದೀಪಕ್ ಹಳದೀಪುರ್, ಮಹದೇವ ಅಯ್ಯರ್, ಡಾ. ಗಿರಿಧರ ಕಜೆ, ಡಾ. ಬಿ.ಟಿ. ರುದ್ರೇಶ್, ಸಂಘದ ಪ್ರಮುಖರಾದ ಶ್ರೀ ಮುಕುಂದ, ಶ್ರೀ ವಿ. ನಾಗರಾಜ್, ಶ್ರೀ ನಾ. ತಿಪ್ಪೇಸ್ವಾಮಿ, ಶ್ರೀ ಸುಧೀರ್, ಕರ್ನಾಟಕದ ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ, ಸಚಿವ ಶ್ರೀ ಸುಧಾಕರ್, ಶ್ರೀ ಅರಗ ಜ್ಞಾನೇಂದ್ರ, ಡಾ. ಅಶ್ವತ್ಥನಾರಾಯಣ, ಶ್ರೀ ಮುನಿರತ್ನ, ರಾಷ್ಟ್ರೋತ್ಥಾನ ಪರಿಷತ್ತಿನ ಹಿರಿಯ, ಉತ್ಥಾನ ಮಾಸಪತ್ರಿಕೆಯ ಗೌರವ ಸಂಪಾದಕ ನಾಡೋಜ ಎಸ್.ಆರ್. ರಾಮಸ್ವಾಮಿ, ಪ್ರಮುಖರಾದ ಶ್ರೀ ಅಶೋಕ್, ಕಸಾಪ ರಾಜ್ಯಾಧ್ಯಕ್ಷ ನಾಡೋಜ ಡಾ. ಮಹೇಶ್ ಜೋಶಿ ಮೊದಲಾದವರು ಉಪಸ್ಥಿತರಿದ್ದರು.

# ಹೃದಯದಿಂದ ಸೇವೆ ಮಾಡಲು ದತ್ತಾತ್ರೇಯ ಹೊಸಬಾಳೆ ಕರೆ

**ವಿಜಯಪುರ:** 'ವಸುಧೈವ ಕುಟುಂಬಕಂ' ಎನ್ನುವುದು ಭಾರತೀಯ ಸಂಸ್ಕೃತಿಯ ಮೂಲಾಧಾರ, ಈ ಉಕ್ತಿಯನ್ನು ಜೀವನದ ಉಸಿರಾಗಿಸಿಕೊಂಡು ಎಲ್ಲರೂ ಒಂದೇ ಕುಟುಂಬದ ಸದಸ್ಯರು ಎಂಬ ಭಾವನೆ ಬೆಳೆಸಿಕೊಂಡು ಜೀವನದಲ್ಲಿ ಮುನ್ನಡೆಯಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಕರೆ ನೀಡಿದರು.




ವಿಜಯಪುರದ ಮಹಾತ್ಮಾ ಗಾಂಧಿ ಕಾಲೋನಿಯಲ್ಲಿ ಸೇವಾ ಭಾರತಿ ಹಾಗೂ ಲೋಕಹಿತ ಟ್ರಸ್ಟ್ ಸಹಯೋಗದಲ್ಲಿ ಏರ್ಪಡಿಸಲಾಗಿದ್ದ 'ಸಂವೇದನಾ' ಎನ್ನುವ ಸೇವಾ ಪ್ರಕಲ್ಪ, ನಿತ್ಯ ಅನ್ನದಾಸೋಹ ಕಾರ್ಯಕ್ರಮಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಿ ಸಂದೇಶ ನೀಡಿದ ಅವರು, ಜಗತ್ತೇ ಒಂದು ಕುಟುಂಬ, ಇಡೀ ವಿಶ್ವವೇ ಒಂದು ಮನೆ, ಇಡೀ ತ್ರಿಲೋಕವೇ ಒಂದು ದೇಶ ಎಂಬ ಉದಾತ್ತ ಭಾವನೆಯ ಪ್ರತಿರೂಪವೇ ನಮ್ಮ ಭಾರತೀಯ ಸಂಸ್ಕೃತಿ ಎಂದರು. ಎಲ್ಲರಿಗೂ ಕಷ್ಟ, ಸುಖಗಳು ಬರುವುದು ಸಾಮಾನ್ಯ, ಕಷ್ಟಗಳು ಬಂದಾಗ ಕಷ್ಟದಲ್ಲಿರುವವರು ನಮ್ಮ ಕುಟುಂಬ ಸದಸ್ಯರೇ ಎಂದು ತಿಳಿದು ಅವರ ಸಂಕಷ್ಟಗಳಿಗೆ ಸ್ಪಂದಿಸಬೇಕು, ಅಭಯ ನೀಡಬೇಕು ಎಂದು ಕರೆ ನೀಡಿದರು.

ಶಂಕರ ಎಂದರೆ ಶಿವ, ಶಿವ ಇಡೀ ಜಗತ್ತಿಗೆ ತಂದೆ, ಹೀಗಾಗಿ ಶಿವ ಭಕ್ತರೆಲ್ಲ ಬಂಧುಗಳೇ, ಇಡೀ ತ್ರಿಲೋಕವೇ ನಮ್ಮ ದೇಶ, ಇದು ಭಾರತೀಯರ ಕಲ್ಪನೆ ಎಂದರು. ಸೇವೆ ಜೀವನದ ಭಾಗವಾಗಬೇಕು, ಸೇವೆ ಎಂದರೆ ಒಂದು ಕರ್ತವ್ಯ, ರೋಗಿ ನಮ್ಮ ಮನೆಯಲ್ಲಿದ್ದರೆ ನಾವು ಆರೈಕೆ ಮಾಡುವುದಿಲ್ಲವೇ? ಹಾಗೆಯೇ ಆರೋಗ್ಯ ಸಮಸ್ಯೆ ಎದುರಿಸುತ್ತಿರುವ ಪ್ರತಿಯೊಬ್ಬರನ್ನೂ ಕುಟುಂಬ ಸದಸ್ಯರೆಂದು ತಿಳಿದು ಆರೈಕೆ ಮಾಡಬೇಕು ಎಂದರು.

ಅನಾಥ ಮಕ್ಕಳ ಸೇವೆ ಪ್ರತಿಯೊಬ್ಬರ ಕರ್ತವ್ಯ, ಯಾವ ಅನಾಥ ಮಕ್ಕಳಿಗೂ ತಾವು ಅನಾಥರು ಎಂಬ ಭಾವನೆ ಬರದಂತೆ ಸಮಾಜ ಅವರನ್ನು ಅಕ್ಕರೆಯಿಂದ ಕಾಣಬೇಕು, ಅವರ ಜೀವನ ರೂಪಿಸಬೇಕು ಎಂದು ಕರೆ ನೀಡಿದರು.

ನಾವೆಲ್ಲರೂ ಒಂದೇ ಎಂಬ ಭಾವನೆ ಹೃದಯದಿಂದ ಬರಬೇಕು, ಹೃದಯದಿಂದ ಸೇವೆ ಮಾಡಬೇಕು, ಒಬ್ಬರಿಗೊಬ್ಬರು ಸಹಾಯ, ಸಹಕಾರ, ಸಹಯೋಗ ನೀಡುತ್ತಾ ಜೀವನದಲ್ಲಿ ಮುನ್ನಡೆಯಬೇಕು ಈ ಸೇವಾ ಕಾರ್ಯವನ್ನೇ ಸಂಘವು ತನ್ನ ಧ್ಯೇಯವಾಗಿಸಿಕೊಂಡಿದೆ ಎಂದರು.

ಕೋವಿಡ್ ಕಾಲಘಟ್ಟದಲ್ಲಿ ಅನೇಕ ನೋವುಗಳನ್ನು ನೋಡಿದ್ದೇವೆ, ಅದೇ ಸಮಯದಲ್ಲಿ ಲಕ್ಷಾಂತರ ಜನರ ನಿಸ್ವಾರ್ಥ, ಅಪರ್ಣಾ ಮನೋಭಾವದ ಸೇವೆಯನ್ನೂ ನಾವು ಗಮನಿಸಿದ್ದೇವೆ, ಈ ಸೇವೆ ನಮಗೆ ಸ್ಫೂರ್ತಿಯಾಗಲಿ, ಸೇವೆ ಮಾಡುತ್ತಾ ಮುನ್ನಡೆಯಲಿ ಎಂದು ಸ್ಫೂರ್ತಿದಾಯಕ ಮಾತುಗಳನ್ನು ಹೇಳಿದರು. ಪ್ರಾಸ್ತಾವಿಕವಾಗಿ ಕಾಲೋನಿಯ ಶಿವಾನಂದ ನೇಕಾರ ಅವರು ಈ ಕುಷ್ಠರೋಗ ಬಂಧುಗಳ ಕಾಲೋನಿಯಲ್ಲಿ ಅನ್ನ ನೀಡುವ ಸೇವಾ ಕಾರ್ಯ ಪ್ರಾರಂಭಿಸಿದ್ದಕ್ಕೆ ಸಂತಸ ವ್ಯಕ್ತಪಡಿಸಿದರು.

90ರ ದಶಕದಿಂದಲೂ ಈ ಕಾಲೋನಿಯ ಕುಷ್ಠರೋಗಿ ಬಂಧುಗಳ ಸಲುವಾಗಿ ದಿ. ವೆಂಕಟೇಶ ಗುರುನಾಯಕರವರು ನಮಗೆಲ್ಲಾ ಜೀವನ ನೀಡಿದ ಪುಣ್ಯಾತ್ಮರು ಎಂದರು.

ಕುಷ್ಠರೋಗಿ ಬಂಧುಗಳ ಜೊತೆಗೆ ಸರಕಾರ್ಯವಾಹರಾದ ದತ್ತಾತ್ರೆಯ ಹೊಸಬಾಳೆಯವರು ಸಹಪಂಕ್ತಿ ಭೋಜನ ಮಾಡಿದರು. ಈ ಸಂದರ್ಭದಲ್ಲಿ ಕ್ಷೇತ್ರೀಯಸಂಘಚಾಲಕ ವಿ.ನಾಗರಾಜ, ಕ್ಷೇತ್ರಿಯ ಕಾರ್ಯವಾಹ ನಾ.ತಿಪ್ಪೆಸ್ವಾಮಿ, ಪ್ರಾಂತಕಾರ್ಯವಾಹ ರಾಘವೇಂದ್ರ ಕಾಗವಾಡ, ಪ್ರಾಂತ ಪ್ರಚಾರಕ ನರೇಂದ್ರ ಲೋಕಹಿತ ಟ್ರಸ್ಟನ ಶ್ರೀಧರ ನಾಡಗೀರ ವಿಭಾಗಸಂಘಚಾಲಕ ಚಿದಂಬರ ಕರಮರಕರ, ಜಿಲ್ಲಾ ಸಂಘ ಚಾಲಕ ಡಾ ಸತೀಶ ಜಿಗಜಿನ್ನಿ ಸೇವಾ ಭಾರತಿ ಟ್ರಸ್ಟ ಅಧ್ಯಕ್ಷ ಬಾಬುರಾವ, ಟ್ರಸ್ಟಿ ಚಂದ್ರಶೇಖರ ಗೋಕಾಕ, ರಮೇಶ,ಪ್ರಾಂತ ಸಂಯೋಜಕ ಶಂಕರ ಗುಮಾಸ್ತೆ, ಉಪಸ್ಥಿತರಿದ್ದರು.

ಪುಂಗವ PUNGAVA
# 74, Ranga Rao Road, Shankarapuram, Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th DECEMBER 2022
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23
FORTNIGHTLY 1-1-2023



## "ಮೈ ಸಾರಿ ಮೈ ಪ್ರೈಡ್" ನೇಯ್ಗೆ ಆಧಾರಿತ ಕೈಮಗ್ಗ ಸೀರೆಗಳ ಉತ್ಸವಕ್ಕೆ ಚಾಲನೆ

ಭಾರತೀಯ ನೇಕಾರ ಸಮುದಾಯವನ್ನು ಬೆಂಬಲಿಸಲು ನೇಕಾರರಿಗೆ ಜಿಐ ಟ್ಯಾಗ್ ಮತ್ತು ಮುಕ್ತ ವ್ಯಾಪಾರ ಒಪ್ಪಂದಗಳನ್ನು (ಎಫ್‌ಟಿಎ) ಸೇರಿಸಲು ಸರ್ಕಾರ ಕೆಲಸ ಮಾಡುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಅವರು ದೆಹಲಿಯಲ್ಲಿ "ಮೈ ಸಾರಿ ಮೈ ಪ್ರೈಡ್" ಎಂಬ ವಿಶೇಷವಾದ ನೇಯ್ಗೆ ಆಧಾರಿತ ಕೈಮಗ್ಗದ ಸೀರೆಗಳ ಉತ್ಸವವಾದ `VIRAASAT - Celebrating 75 handwoven saris of India' ಉದ್ಘಾಟಿಸಿ ಮಾತನಾಡಿದರು.



"ದೇಶದ ನೇಕಾರರು ಮತ್ತು ಭಾರತದ ಸಂಪ್ರದಾಯಗಳನ್ನು ಪ್ರದರ್ಶಿಸುವ ಇಂತಹ ಕಾರ್ಯಕ್ರಮವನ್ನು ದೆಹಲಿಯಲ್ಲಿ ಆಯೋಜಿಸುವ ಮೂಲಕ ಜವಳಿ ಸಚಿವಾಲಯವು ವಿಶಿಷ್ಟ ಹೆಜ್ಜೆ ಇಟ್ಟಿದೆ. ಸಚಿವಾಲಯವು 75 ಕೈಯಿಂದ ನೇಯ್ದ ಸೀರೆಗಳನ್ನು ವಸ್ತುಪ್ರದರ್ಶನದಲ್ಲಿ ಪ್ರದರ್ಶಿಸಿದೆ" ಎಂದಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ 5 ಎಫ್ ದೃಷ್ಟಿಕೋನವನ್ನು ಉಲ್ಲೇಖಿಸಿದ ಸೀತಾರಾಮನ್ – ಫಾರ್ಮ್, ಫೈಬರ್, ಫ್ಯಾಬ್ರಿಕ್‌ನಿಂದ ಫ್ಯಾಷನ್‌ವರೆಗೆ ವಿದೇಶಿವರೆಗೆ ಈ ಪ್ರದರ್ಶನವನ್ನು ಆಯೋಜಿಸಿರುವ ಜವಳಿ ಸಚಿವಾಲಯದ ಉದ್ದೇಶ ಉತ್ತಮವಾಗಿದ್ದು, ನೇಕಾರರು ತಮ್ಮ ಕೆಲಸವನ್ನು ಪ್ರದರ್ಶಿಸಲು ಉತ್ತೇಜಿತರಾಗುತ್ತಿದ್ದಾರೆ ಎಂದಿದ್ದಾರೆ.

ಸ್ವಾತಂತ್ರ್ಯದ 75 ವರ್ಷಗಳ ಜೊತೆಗೆ, ಆಜಾದಿ ಕಾ ಅಮೃತ ಮಹೋತ್ಸವದಲ್ಲಿ 16 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಸೇರಿದ 75 ಕೈಮಗ್ಗ ನೇಕಾರರಿಂದ ಕೈಮಗ್ಗ ಸೀರೆಗಳ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ. ಉತ್ಸವವನ್ನು ಎರಡು ಹಂತಗಳಲ್ಲಿ ಡಿಸೆಂಬರ್ 16 ರಿಂದ 30 2022 ಮತ್ತು ಜನವರಿ 3 ರಿಂದ 17 2023 (11 AM to 8 PM) ವರೆಗೆ ಹ್ಯಾಂಡ್ಲೂಮ್ ಹಾತ್, ಜನಪಥ್, ನವದೆಹಲಿಯಲ್ಲಿ ಆಯೋಜಿಸಲಾಗಿದೆ. ಕೈಮಗ್ಗ ಕ್ಷೇತ್ರವು ಭಾರತದ ಶ್ರೀಮಂತ ಮತ್ತು ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆಯ ಸಂಕೇತವಾಗಿದೆ, ಜೊತೆಗೆ ಅನೇಕ ಜನರಿಗೆ, ವಿಶೇಷವಾಗಿ ಮಹಿಳೆಯರಿಗೆ ಉದ್ಯೋಗವನ್ನು ಒದಗಿಸುವ ಪ್ರಮುಖ ಕ್ಷೇತ್ರಗಳಲ್ಲಿ ಒಂದಾಗಿದೆ.

## ಭಾರತ, ಶ್ರೀಲಂಕಾ ನಡುವೆ ಆರಂಭವಾಗಲಿದೆ ಪ್ರಯಾಣಿಕ ದೋಣಿ ಸೇವೆ

'ಭಾರತ ಮತ್ತು ಶ್ರೀಲಂಕಾ ನಡುವೆ ಮುಂದಿನ ತಿಂಗಳಿನಿಂದ ಪ್ರಯಾಣಿಕರ ದೋಣಿ ಸೇವೆ ಪ್ರಾರಂಭವಾಗಲಿದೆ. ಈ ದೋಣಿ ಸೇವೆಯು ಜಾಫ್ನಾ ಜಿಲ್ಲೆ ಮತ್ತು ಪುದುಚೇರಿಯ ಕಂಕಸಂತುರೈ ಬಂದರನ್ನು ಸಂಪರ್ಕಿಸುತ್ತದೆ. ಈ ಸೇವೆಗೆ ಭಾರತ ಸರ್ಕಾರ ಒಪ್ಪಿಗೆ ನೀಡಿದೆ' ಎಂದು ಶ್ರೀಲಂಕಾದ ಬಂದರು ಮತ್ತು ಹಡಗು ಸಚಿವ ನಿಮಲ್ ಸಿರಿಪಾಲ ಡಿ'ಸಿಲ್ವಾ ಹೇಳಿದ್ದಾರೆ.

'ಪ್ರಯಾಣಿಕ ದೋಣಿ ಸೇವೆಯು ಪ್ರವಾಸೋದ್ಯಮ ಕ್ಷೇತ್ರವನ್ನು ಉತ್ತೇಜಿಸುವ ಜೊತೆಗೆ ಉಭಯ ದೇಶಗಳ ನಡುವಿನ ಸಾಂಸ್ಕೃತಿಕ ಸಂಬಂಧಗಳನ್ನು ಬಲಪಡಿಸುವ ಸಾಧ್ಯತೆಯಿದೆ. ಸಂಪರ್ಕವನ್ನು ಸುಧಾರಿಸಲು ಹಲವಾರು ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು ಸೇವೆಯನ್ನು ಪ್ರಾರಂಭಿಸಲಾಗುತ್ತಿದೆ. ದಕ್ಷಿಣ ಭಾರತದಿಂದ ಶ್ರೀಲಂಕಾದ ಟ್ರಿಂಕೋಮಲಿ ಮತ್ತು ಕೊಲಂಬೊಗೆ ಸೇವೆಗಳನ್ನು ಪ್ರಾರಂಭಿಸಲಾಗುವುದು' ಎಂದು ಶ್ರೀಲಂಕಾದ ಬಂದರು ಮತ್ತು ಹಡಗು ಸಚಿವ ನಿಮಲ್ ಸಿರಿಪಾಲ ಡಿ'ಸಿಲ್ವಾ ಹೇಳಿದ್ದಾರೆ.



ಶ್ರೀಲಂಕಾ ಬಂದರುಗಳಲ್ಲಿ ಕಸ್ಟಮ್ಸ್, ವಲಸೆ ಮತ್ತು ಇತರ ಸೌಲಭ್ಯಗಳಿಗೆ ಸಂಬಂಧಿಸಿದ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಸಚಿವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಹೊಸ ಸೇವೆಯ ಅಡಿಯಲ್ಲಿ ಹಡಗುಗಳು 300 ರಿಂದ 400 ಪ್ರಯಾಣಿಕರನ್ನು ಟ್ರಿಪ್‌ನಲ್ಲಿ ಸಾಗಿಸುತ್ತವೆ, ಅದು ಸುಮಾರು ಮೂರೂವರೆ ಗಂಟೆಗಳ ಕಾಲ ಪ್ರಯಾಣಕ್ಕೆ ತೆಗೆದುಕೊಳ್ಳುತ್ತದೆ.

ಒಂದು ಪ್ರಯಾಣಕ್ಕೆ ಪ್ರತಿ ಪ್ರಯಾಣಿಕರಿಗೆ 5,000 ರೂಪಾಯಿಗಳಿಗೆ ಸಮಾನವಾದ 60 ಡಾಲರ್‌ಗಳನ್ನು ನೀಡಬೇಕು ಮತ್ತು ಪ್ರತಿ ಪ್ರಯಾಣಿಕರು 100 ಕೆಜಿಯಷ್ಟು ಲಗೇಜ್‌ಗಳನ್ನು ಸಾಗಿಸಬಹುದು ಎಂದು ದೋಣಿ ಮಾಲೀಕರು ಸಲಹೆ ನೀಡಿದ್ದಾರೆ.

## ಅವಳಿ ಪಾಕಿಸ್ಥಾನಿ ಡ್ರೋನ್‌ಗಳ ಒಳನುಸುಳುವ ಪ್ರಯತ್ನ ವಿಫಲಗೊಳಿಸಿದ BSF

ಪಂಜಾಬಿನ ಗುರುದಾಸ್ಪುರದಲ್ಲಿ ಭಾರತದೊಳಗೆ ನುಗ್ಗಲು ಯತ್ನಿಸಿದ ಅವಳಿ ಪಾಕಿಸ್ಥಾನಿ ಡ್ರೋನ್‌ಗಳ ಪ್ರಯತ್ನಗಳನ್ನು ಬಿಎಸ್‌ಎಫ್ ವಿಫಲಗೊಳಿಸಿದೆ. ಭಾನುವಾರ ರಾತ್ರಿ ಪಂಜಾಬ್‌ನ ಗುರುದಾಸ್ಪುರದಲ್ಲಿ ಬಿಎಸ್‌ಎಫ್ ಕಣ್ಗಾವಲು ಪಡೆಗಳು ಎರಡು ಪಾಕ್ ಡ್ರೋನ್‌ಗಳನ್ನು ಒಂದು ಚಂದು ಬಟಾಲಾ ಪ್ರದೇಶದಲ್ಲಿ ಮತ್ತು ಮತ್ತೊಂದನ್ನು ಗುರುದಾಸ್ಪುರದ ಕಸ್ಸೋವಾಲ್ ಪ್ರದೇಶದಲ್ಲಿ ಕಂಡುಹಿಡಿದು ಹಿಮ್ಮೆಟ್ಟಿಸಿವೆ. ಅಧಿಕಾರಿಗಳ ಪ್ರಕಾರ, ಪಂಜಾಬ್ ಬಿಎಸ್‌ಎಫ್ ಪಡೆಗಳು ಭಾನುವಾರ ರಾತ್ರಿ 10:20ಕ್ಕೆ ಗುರುದಾಸ್ಪುರದ ಚಂದು ಬಟಾಲಾ ಪ್ರದೇಶದಲ್ಲಿ ಪಾಕಿಸ್ತಾನದ ಡ್ರೋನ್ ಅನ್ನು ಗುರುತಿಸಿವೆ.



'ಡ್ರೋನ್ ಅನ್ನು ಗುರುತಿಸಿದ ತಕ್ಷಣ, ಸೈನಿಕರು ಡ್ರೋನ್ ಮೇಲೆ 26 ಸುತ್ತು ಗುಂಡು ಹಾರಿಸಿದರು. ಮೊದಲ ಡ್ರೋನ್ ಕಾಣಿಸಿಕೊಂಡ 28 ನಿಮಿಷಗಳ ನಂತರ ಗುರುದಾಸ್ಪುರದ ಕಸ್ಸೋವಾಲ್ ಪ್ರದೇಶದಲ್ಲಿ ರಾತ್ರಿ 10:48ಕ್ಕೆ ಬಿಎಸ್‌ಎಫ್ ಪಡೆಗಳು ಮತ್ತೊಂದು ಡ್ರೋನ್ ಅನ್ನು ಗುರುತಿಸಿದವು. ತಕ್ಷಣವೇ ಪ್ರತಿಕ್ರಿಯಿಸಿದ ಸೈನಿಕರು ಡ್ರೋನ್‌ಗೆ 72 ಸುತ್ತು ಗುಂಡು ಹಾರಿಸಿದರು. ಎರಡೂ ಡ್ರೋನ್‌ಗಳನ್ನು ಪಾಕಿಸ್ತಾನದ ಕಡೆಗೆ ಹಿಂದಕ್ಕೆ ಓಡಿಸಲಾಯಿತು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಾಕಿಸ್ತಾನಿ ಡ್ರೋನ್‌ಗಳು ಭಾರತದ ಭೂಪ್ರದೇಶಕ್ಕೆ ನುಸುಳುತ್ತಿರುವ ನಿದರ್ಶನಗಳು ಗಡಿ ಪ್ರದೇಶಗಳಿಂದ ವರದಿಯಾಗುತ್ತಲೇ ಇದೆ. ಈ ಪ್ರಯತ್ನಗಳನ್ನು ಬಿಎಸ್‌ಎಫ್ ವಿಫಲಗೊಳಿಸುತ್ತಲೇ ಇದೆ.

## ಸುವರ್ಣಸೌಧದಲ್ಲಿ ಸಾವರ್ಕರ್ ಸೇರಿದಂತೆ 7 ಮಹನೀಯರ ಭಾವಚಿತ್ರ ಅನಾವರಣ



ರಾಜ್ಯ ಸರ್ಕಾರ ಇಂದು ಸುವರ್ಣಸೌಧದ ಸಭಾಂಗಣದಲ್ಲಿ ವೀರ ಸಾವರ್ಕರ್ ಸೇರಿದಂತೆ ಏಳು ಮಹಾನ್ ನಾಯಕರ ಭಾವಚಿತ್ರವನ್ನು ಅನಾವರಣ ಮಾಡಿದೆ. ಸ್ಪೀಕರ್ ವಿಶ್ವೇಶ್ವರ್ ಹೆಗಡೆ ಕಾಗೇರಿ, ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ನೇತೃತ್ವದಲ್ಲಿ ಸಾವರ್ಕರ್ ಫೋಟೋವನ್ನು ಅನಾವರಣ ಮಾಡಲಾಗಿದೆ.

ಸಾವರ್ಕರ್, ಮಹಾತ್ಮ ಗಾಂಧೀಜಿ, ಅಂಬೇಡ್ಕರ್, ನೇತಾಜಿ, ಸರ್ದಾರ್ ವಲ್ಲಭ್ ಬಾಯ್ ಪಟೇಲ್, ಸ್ವಾಮಿ ವಿವೇಕಾನಂದ, ಬಸವಣ್ಣರ ಫೋಟೋಗಳನ್ನೂ ಈ ವೇಳೆ ಅನಾವರಣ ಮಾಡಲಾಗಿದೆ. ವೀರ ಸಾವರ್ಕರ್ ಅವರ ಫೋಟೋವನ್ನು ವಿಧಾನಸಭೆಯಲ್ಲಿ ಅನಾವರಣಗೊಳಿಸಿದ್ದಕ್ಕೆ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸಿದೆ. ಈ ಸಂಬಂಧ ಸುವರ್ಣಸೌಧದ ಮೆಟ್ಟಿಲುಗಳ ಮೇಲೆ ಪ್ರತಿಭಟನೆ ನಡೆಸುತ್ತಿದೆ.

ಇನ್ನೊಂದೆಡೆ ಸಂಗೊಳ್ಳಿ ರಾಯಣ್ಣ, ಕಿತ್ತೂರು ಚೆನ್ನಮ್ಮ, ಮಹಾತ್ಮಗಾಂಧಿ, ಅಂಬೇಡ್ಕರ್ ಪ್ರತಿಮೆಗಳನ್ನು ಸುವರ್ಣಸೌಧದಲ್ಲಿ ನಿರ್ಮಾಣ ಮಾಡುವುದಾಗಿ ಮುಖ್ಯಮಂತ್ರಿ ಘೋಷಣೆ ಮಾಡಿದ್ದಾರೆ. ಇದೇ ಅಧಿವೇಶನದಲ್ಲಿ ಮೂರ್ತಿ ಸ್ಥಾಪನೆಗೆ ಶಂಕು ಸ್ಥಾಪನೆ ನೆರವೇರುವ ನಿರೀಕ್ಷೆ ಇದೆ.

## ಪೇಟೆಂಟ್ ಅರ್ಜಿಗಳ ವಿಲೇವಾರಿ ಅವಧಿ ಕಡಿತಕ್ಕೆ ಕೇಂದ್ರದ ಪ್ರಯತ್ನ: ನಿರ್ಮಲಾ

'ಪೇಟೆಂಟ್‌ಗಾಗಿ ಸಲ್ಲಿಸಲಾದ ಅರ್ಜಿಗಳನ್ನು ವಿಲೇವಾರಿಗೊಳಿಸುವ ಸಮಯವನ್ನು ಇನ್ನಷ್ಟು ಕಡಿಮೆ ಮಾಡುವಲ್ಲಿ ಕೇಂದ್ರವು ತೊಡಗಿಸಿಕೊಂಡಿದೆ, ಇದನ್ನು ಈಗಾಗಲೇ ಹಿಂದಿನ 72 ತಿಂಗಳಿಂದ 12–24 ತಿಂಗಳುಗಳಿಗೆ ಕಡಿತಗೊಳಿಸಲಾಗಿದೆ' ಎಂದು ಕೇಂದ್ರ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

'ಪೇಟೆಂಟ್‌ಗಳಿಗಾಗಿ ದೇಶೀಯ ಅರ್ಜಿ ಸಲ್ಲಿಕೆ ಹೆಚ್ಚುತ್ತಿದೆ ಮತ್ತು 2021ರಲ್ಲಿ ಒಟ್ಟು 58,502 ಪೇಟೆಂಟ್‌ಗಳನ್ನು ಸಲ್ಲಿಸಲಾಗಿದ್ದು, 28,391 ಅನ್ನು ತೆರವುಗೊಳಿಸಲಾಗಿದೆ' ಎಂದು ಅವರು ಸಮಾರಂಭವೊಂದರಲ್ಲಿ ಹೇಳಿದರು.

'2016ರಲ್ಲಿ ಸ್ಟಾರ್ಟ್ ಅಪ್ ನೀತಿಯನ್ನು ಘೋಷಿಸಿದಾಗ, ಸ್ಟಾರ್ಟ್–ಅಪ್‌ಗಳು ಐಪಿಗಳನ್ನು ಸಲ್ಲಿಸಲು ಸಹಾಯವನ್ನು ಪಡೆಯಲು ಸಾಕಷ್ಟು ನೀತಿಗಳನ್ನು ತರಲಾಯಿತು. ಪೇಟೆಂಟ್‌ಗಳನ್ನು ತೆರವುಗೊಳಿಸಲು ತೆಗೆದುಕೊಂಡ ದಿನಗಳ ಸಂಖ್ಯೆ 2016ರಲ್ಲಿ 72 ತಿಂಗಳುಗಳು ಇತ್ತು. ಡಿಸೆಂಬರ್ 2020ರ ಹೊತ್ತಿಗೆ 12 ತಿಂಗಳುಗಳಿಗೆ ಇಳಿದಿದೆ, ಕೆಲವು ಸಂದರ್ಭಗಳಲ್ಲಿ 24 ತಿಂಗಳುಗಳು ಬೇಕಾಗಿದೆ. ನಾವು ಅದನ್ನು ಮತ್ತಷ್ಟು ಇಳಿಸಲು ಪ್ರಯತ್ನಿಸುತ್ತಿದ್ದೇವೆ' ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸತತ 3ನೇ ಬಾರಿಗೆ ಟಿ20 ವಿಶ್ವಕಪ್ ಗೆದ್ದ ಭಾರತದ ಅಂಧರ ತಂಡ



ಟಿ20 ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಬಾಂಗ್ಲಾದೇಶದ ವಿರುದ್ಧ ಭಾರತ ಗೆಲುವು ಸಾಧಿಸಿದೆ. ಈ ಮೂಲಕ ಮೂರನೇ ಬಾರಿಗೆ ಭಾರತೀಯ ಅಂಧರ ಕ್ರಿಕೆಟ್ ತಂಡ ಪ್ರಶಸ್ತಿ ಗೆದ್ದು ಹ್ಯಾಟ್ರಿಕ್ ಸಾಧನೆಯನ್ನು ಮಾಡಿದೆ. ಎಂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ತಂಡ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿದ್ದು, ಅದರಂತೆ ಭಾರತ 20 ಓವರ್‌ಗಳಲ್ಲಿ ಎರಡು ವಿಕೆಟ್ ನಷ್ಟಕ್ಕೆ 277 ರನ್‌ಗಳ ಬೃಹತ್ ಮೊತ್ತವನ್ನು ಗಳಿಸಿತು.

ಭಾರತದ ಪರ ಸುನಿಲ್ ರಮೇಶ್ ಔಟ್ ಆಗದೆ 136, ಅಜಯ್ ಕುಮಾರ್ ರೆಡ್ಡಿ ಔಟ್ ಆಗದೆ 100 ಶತಕ ಸಿಡಿಸಿ ಸಂಭ್ರಮಿಸಿದರು. 278 ರನ್‌ಗಳ ಬೃಹತ್ ಮೊತ್ತ ಬೆನ್ನೆತ್ತಿದ ಬಾಂಗ್ಲಾ 20 ಓವರ್‌ಗಳಲ್ಲಿ ಮೂರು ವಿಕೆಟ್ ಕಳೆದುಕೊಂಡು 157 ರನ್ ಗಳಿಸಿ ಸೋಲು ಕಂಡಿತು. ಇದರೊಂದಿಗೆ ಭಾರತ 120 ರನ್‌ಗಳ ಅಂತರದಿಂದ ಗೆಲುವಿನ ನಗೆ ಬೀರಿತು. ಈ ಹಿಂದೆ ಎರಡು ಆವೃತ್ತಿಗಳಲ್ಲಿ ಭಾರತ ತಂಡ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿತ್ತು. 2012ರಲ್ಲಿ ಪಾಕಿಸ್ತಾನವನ್ನು ಮಣಿಸಿ ಪ್ರಶಸ್ತಿ ಗೆದ್ದಿತ್ತು 2017ರಲ್ಲಿ ಪಾಕಿಸ್ತಾನದ ವಿರುದ್ಧವೇ ಜಯಗಳಿಸಿತ್ತು.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.